ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ

ಸಂಪುಟ/Volume : 40
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 10/–

ಆಗಸ್ಟ್ 2018 ಮಾಸ ಪತ್ರಿಕೆ

Akhila Karnataka Shikshaka Samachar | August 2018 | Monthly



# 72 ನೇ ಸ್ವಾತಂತ್ರ್ಯ ದಿನಾಚರಣೆ



ಸ್ವತಂತ್ರ ಭಾರತದ ವರ್ತಮಾನ–ಭವಿಷ್ಯ 3



ಸ್ತ್ರೀ ಸಾಮರ್ಥ್ಯ 4

ರಾಜ್ಯ ಕಾರ್ಯಕಾರಿಣಿ ಸಭೆ 5



ರಾಷ್ಟ್ರೀಯತೆ ಮೂಡಿಸುವಲ್ಲಿ ಶಿಕ್ಷಕರ ಪಾತ್ರ 6



ನಾಗರ ಪಂಚಮಿ ನವಚೇತನಗಳ ಆಗರ 7

A Journal of Karnataka State Secondary Teachers' Association

## ಸಂಪಾದಕೀಯ

# ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ

"ಮನೆಯೇ ಮೊದಲ ಪಾಠಶಾಲೆ, ತಾಯಿ ಮೊದಲ ಗುರು." ಬದುಕಿನ ಮೊದಲ ಪಾಠ ಪ್ರಾರಂಭವಾಗುವುದು ಮನೆಯಲ್ಲಿಯೇ ತಾನೇ. ಈ ಪಾಠವನ್ನು ಮಗು ತಾಯಿ-ತಂದೆ, ಮನೆಯ ಇತರೆ ಸದಸ್ಯರನ್ನು ಅನುಕರಿಸುತ್ತಾ ಕಲಿಯುತ್ತದೆ. ಈ ಪ್ರಕ್ರಿಯೆಯಲ್ಲಿ ಬಳಕೆಯಾಗುವ ಭಾಷೆಯೇ ಮಾತೃಭಾಷೆ. ತನ್ನ ಬೇಕು-ಬೇಡಗಳನ್ನು, ಅನಿಸಿಕೆಗಳನ್ನು ತಿಳಿಸಲು ಮಗು ಬಳಸುವ ಮೊದಲ ಭಾಷೆ ಮಾತೃಭಾಷೆ.

ಮುಂದಿನ ಹಂತದಲ್ಲಿ ಮಗು ತಂದೆ-ತಾಯಿ, ಮನೆಯ ಇತರೆ ಸದಸ್ಯರು, ನೆಂಟರಿಷ್ಟರು, ಅಕ್ಕ-ಪಕ್ಕದ ಮನೆಯವರು ಒಟ್ಟಾರೆಯಾಗಿ ತನ್ನ ಸುತ್ತಮುತ್ತಲಿನ ಪರಿಸರ, ಸಮಾಜದ ನಡವಳಿಕೆಗಳನ್ನು ಗಮನಿಸುತ್ತದೆ. ಈ ಹಂತದಲ್ಲಿ ಮಗು ಬೆಳೆಯುವ ಪರಿಸರದ ಭಾಷೆ ಪ್ರಮುಖವಾಗುತ್ತದೆ.

ನಂತರದಲ್ಲಿ ಮಗುವು ಔಪಚಾರಿಕ ಶಿಕ್ಷಣವನ್ನು ಪಡೆಯಲು ಶಾಲೆಯನ್ನು ಪ್ರವೇಶಿಸಬೇಕಾದಾಗ ಆ ಮುಗುವಿನ ಔಪಚಾರಿಕ ಶಿಕ್ಷಣದ ಭಾಷಾ ಮಾಧ್ಯಮ ಯಾವುದಾಗಬೇಕೆಂಬುದನ್ನು ನಿರ್ಧಾರ ಮಾಡುವ ಜವಾಬ್ದಾರಿ ತಂದೆ-ತಾಯಿಗಳದ್ದೇ. ಪೋಷಕರು ಮಕ್ಕಳಿಗೆ ಶಿಕ್ಷಣಕ್ಕೆ ಭಾಷಾ ಮಾಧ್ಯಮ ಆಯ್ಕೆ ಮಾಡಿಕೊಳ್ಳುವಾಗ ಅವರ ಯೋಚನೆಗೆ ಮಾರ್ಗಸೂಚಿಯಾಗಿ ನಿಲ್ಲಬೇಕಾದ ಅವಶ್ಯಕತೆ ಸಮಾಜಕ್ಕಿದೆ. ಒಂದೆಡೆ ನಾಡು, ಭಾಷೆ, ಸಂಸ್ಕೃತಿಗಳಿಗೆ ಎದುರಾಗಿರುವ ಆಪತ್ತಿನ ನಿವಾರಣೆಯ ಬಯಕೆ, ಮತ್ತೊಂದೆಡೆ ಈ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಮಕ್ಕಳು ಯಶಸ್ವಿಯಾಗಲು ಪೂರಕವಾದ ವಿದ್ಯೆಯನ್ನು ಅವರಿಗೆ ಒದಗಿಸಬೇಕೆಂಬ ಹಂಬಲ. ಆಯ್ಕೆಯ ಅವಕಾಶವಿದ್ದಾಗ ಹೆಚ್ಚಿನ ಪೋಷಕರ ಆಯ್ಕೆ ಎರಡನೇಯದಾಗಿದೆ.

ನಾವು ಇಲ್ಲಿ ಅವಕಾಶ ಮತ್ತು ಆಯ್ಕೆಯ ಬಗ್ಗೆ ಯೋಚಿಸೋಣ: ಪ್ರಪಂಚದ ಅನೇಕ ಶ್ರೇಷ್ಠ ಭಾಷಾ ವಿಜ್ಞಾನಿಗಳು ನಡೆಸಿದ ಸಂಶೋಧನೆಗಳನ್ನು ಅವಲೋಕಿಸಿದಾಗ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವಾದರೆ ಮಾತ್ರ ಕಲಿಕೆ ಸಫಲಗೊಳ್ಳುತ್ತದೆ ಎಂಬುದು ಗೊತ್ತಾಗುತ್ತದೆ. ಕಾರಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು

- ಮಕ್ಕಳಿಗೆ ತನ್ನ ಪರಿವಾರದ, ಸಮಾಜದ ಪರಿಚಯವಾಗುವುದು ಬಾಲ್ಯದಲ್ಲಿಯೇ ಮತ್ತು ಪರಿಚಯವಾಗುವುದು ಮಾತೃಭಾಷಾಯಲ್ಲಿಯೇ.
- ಮಗುವು ಔಪಚಾರಿಕ ಶಿಕ್ಷಣಕ್ಕೆ ಕಾಲಿಡುವಾಗ ಮಗುವಿನ ಶಬ್ದ ಭಂಡಾರದಲ್ಲಿರುವ ಶಬ್ದಗಳೆಲ್ಲವೂ ಇರುವುದು ಮಾತೃಭಾಷೆಯಲ್ಲಿಯೆ.
- ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಮಗುವಿಗೆ ಅರ್ಥೈಸಬೇಕಾಗಿರುವ ವಿಷಯವು ಪರಿವಾರ, ಸಮಾಜದ ಬಗ್ಗೆಯೇ ಆಗಿರುವುದರಿಂದ ಮಗುವು ಈಗಾಗಲೇ ಚಿರಪರಿಚಿತವಾಗಿರುವ ಭಾಷೆಯಲ್ಲಿಯೇ ತಿಳಿಸಿದರೆ ಆಗುವ ಅನುಕೂಲ ಹೆಚ್ಚು.
- ಮಗುವಿನ ಕಲಿಕೆ ಪರಭಾಷೆಯಲ್ಲಾದರೆ, ಅದಕ್ಕೆ ಮಾತೃಭಾಷೆಯಲ್ಲಿ ಕಲಿಯಲು ಬೇಕಾಗುವ ಸಮಯದ ಸುಮಾರು ಏಳು ಪಟ್ಟು ಹೆಚ್ಚು ಸಮಯ ಅವಶ್ಯಕವಾಗುತ್ತದೆ.
- 1952ರ ಮೊದಲಿಯಾರ್ ಶಿಕ್ಷಣ ಆಯೋಗವು ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿ ಮಾಧ್ಯಮಿಕ ಶಿಕ್ಷಣದ ವಿವಿಧ ಸಮಸ್ಯೆಗಳನ್ನು ಅಧ್ಯಯನ ಮಾಡಿ 1953ರಲ್ಲಿ ನೀಡಿದ ಪ್ರಮುಖ ಶಿಫಾರಸ್ಸುಗಳಲ್ಲಿ ಬೋಧನಾ ಮಾಧ್ಯಮವು ಮಾತೃಭಾಷೆ ಅಥವಾ ರಾಜ್ಯ ಭಾಷೆಯಾಗಿರಬೇಕೆಂಬುದು ಪ್ರಮುಖವಾಗಿತ್ತು.
- ತಾಯಿ ನುಡಿ ಇಲ್ಲವೇ ಮಗು ಮೊದಲು ಕಲಿತ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಕಲಿತು ಬಳಿಕ ಅನ್ಯ ಭಾಷೆ ಕಲಿತರೆ ಅದೊಂದು ಯಶಸ್ವಿ ಕಲಿಕೆಯಾಗುತ್ತದೆ.
- ಆರ್ಥಿಕ ಮತ್ತು ವೈಜ್ಞಾನಿಕ ಪ್ರಗತಿ ಸಾಧಿಸಿರುವ ರಷ್ಯಾ, ಚೀನಾ, ಜಪಾನ್, ಜರ್ಮನಿ, ಕೊರಿಯಾ, ಸಿಂಗಪುರಗಳಲ್ಲಿ ಇಂಗ್ಲೀಷ್ ಮೊದಲ ಭಾಷೆಯಲ್ಲ. ಮುಂದುವರಿದ ಹತ್ತು ದೇಶಗಳ ಪೈಕಿ ಅಮೇರಿಕ ಬಿಟ್ಟರೆ ಬೇರೆ ಯಾವ ದೇಶದಲ್ಲೂ ಇಂಗ್ಲೀಷ್ ಪ್ರಧಾನ ಭಾಷೆಯಾಗಿಲ್ಲ.
- ಆಂಗ್ಲಶಾಲೆಗಳಲ್ಲಿ ಕಲಿಸುತ್ತಿರುವ ವಿಷಯಗಳು ಮಕ್ಕಳಿಗೆ ಅನಿವಾರ್ಯವಲ್ಲ. ಅಲ್ಲಿ ಹೆಚ್ಚುವರಿ ಪಠ್ಯಪುಸ್ತಕಗಳನ್ನು ಯಾವ ಶಿಕ್ಷಣ ತಜ್ಞರೂ ಶಿಫಾರಸ್ಸು ಮಾಡಿಲ್ಲ.
- ಮಕ್ಕಳಿಗೆ ಶಿಕ್ಷಣವೆಂಬುದು ಅನ್ಯಭಾಷೆಯಲ್ಲಾದರೆ ತಮಗೆ ಅನಿಸಿದ್ದನ್ನು ಹೇಳುವ ಸ್ವಾತಂತ್ರ್ಯವಿರುವುದಿಲ್ಲ. ಸದಾಕಾಲ ತಪ್ಪಾಗ ಬಹುದೇನೋ ಎಂಬ ಭೀತಿಯಲ್ಲಿ ಅವರು ಮುಳುಗಿರುತ್ತಾರೆ. ಶಿಕ್ಷಕರೂ ಸಹ ಪುಸ್ತಕದಲ್ಲಿರುವುದನ್ನು ಮಾತ್ರ ಹೇಳುವ ಗಿಳಿಗಳಾಗುತ್ತಾರೆ.

1916ರಲ್ಲಿ ಇಂಗ್ಲೀಷ್ ಕುರಿತು ಗಾಂಧೀಜಿಯವರು "ವಿದೇಶದ ಆಡಳಿತದಿಂದ ಬಂದೊದಗಿದ ಪೀಡನೆ ಎಂದರೆ ಈ ಆಂಗ್ಲ ಶಿಕ್ಷಣ ಮಾಧ್ಯಮ. ಇದು ರಾಷ್ಟ್ರದ ಶಕ್ತಿಯನ್ನು ಕುಂದಿಸಿ ಮಕ್ಕಳ ಆಯುಷ್ಯವನ್ನು ಮೊಟಕುಗೊಳಿಸುತ್ತದೆ. ಮಕ್ಕಳನ್ನು ಸಾರ್ವಜನಿಕರೊಂದಿಗೆ ಬೇರ್ಪಡಿಸಿದೆಯಲ್ಲದೆ ಶಿಕ್ಷಣ ವೆಚ್ಚವನ್ನು ಹೆಚ್ಚಿಸಿದೆ. ಇದು ರಾಷ್ಟ್ರದ ಆತ್ಮ ವಿನಾಶಕ್ಕೆ ಕಾರಣವಾಗುತ್ತದೆ. ಅನಿಷ್ಟವಾದ ಇಂಗ್ಲೀಷ್ ತೊಲಗಿಸಲು ಸೂಕ್ತ ವಿಧಾನವನ್ನು ಕಂಡುಕೊಳ್ಳಬೇಕು" ಎಂದು ಹೇಳಿದ್ದರು.

ಈ ಎಲ್ಲಾ ಕಾರಣಗಳಿಂದಾಗಿ ಕನ್ನಡಿಗರು ಜಾಗೃತರಾಗಿ ಮಾತೃಭಾಷೆಯಲ್ಲಿ ಸಮಾನ ಶಿಕ್ಷಣ ಜಾರಿಯಾಗಬೇಕೆಂದು ಪಟ್ಟು ಹಿಡಿದು ಆಳುವ ವರ್ಗಗಳ ಮೇಲೆ ಒತ್ತಡ ತರಬೇಕಿದೆ. ಮಾತೃಭಾಷಾ ಶಿಕ್ಷಣ ನೀತಿಗೆ ಮಾರಕವಾಗಿರುವ ನಿರ್ಧಾರಗಳನ್ನು ಬದಲಿಸಬೇಕಾಗಿದೆ. ಹೀಗಾಗಿ ಜನಪ್ರತಿನಿಧಿಗಳ ಮೇಲೆ ಅತೀವ ಒತ್ತಡ ತರಬೇಕಿದೆ. ಸಮಾನ ಮಾತೃಭಾಷಾ ಮಾಧ್ಯಮ ಶಿಕ್ಷಣ ಜಾರಿಯಾಗುವವರೆಗೂ ಜನಾಂದೋಲನ ನಿರಂತರವಾಗಬೇಕಿದೆ. ಮೂರು ಸಾವಿರ ವರ್ಷಗಳಿಂದ ಕನ್ನಡಿಗರನ್ನು ಒಂದು ಗೂಡಿಸಿದ ಭಾಷೆ ಇನ್ನೂ ಸಾವಿರಾರು ವರ್ಷಗಳ ಕಾಲ ಕನ್ನಡನಾಡಿನಲ್ಲಿ ನೆಲೆಯೂರಬೇಕಿದೆ.

ಸಂಪಾದಕ

## ಪರಿವಿಡಿ


- ಸ್ವತಂತ್ರ ಭಾರತದ ವರ್ತಮಾನ-ಭವಿಷ್ಯ 3
- ಸ್ತ್ರೀ ಸಾಮರ್ಥ್ಯ 4
- ರಾಜ್ಯ ಕಾರ್ಯಕಾರಿಣಿ ಸಭೆ 5
- ರಾಷ್ಟ್ರೀಯತೆ ಮೂಡಿಸುವಲ್ಲಿ ಶಿಕ್ಷಕರ ಪಾತ್ರ 6
- ನಾಗರ ಪಂಚಮಿ ನವಚೇತನಗಳ ಆಗರ 7
- ಬೆಂಗಳೂರು ಉತ್ತರ ಜಿಲ್ಲೆ ಪ್ರತಿಭಾ ಪುರಸ್ಕಾರ 8
- ಕಲ್ಬುರ್ಗಿಯಲ್ಲಿ ಗುರುವಂದನಾ 9
- ವಿವಿಧೆಡೆ ಪ್ರತಿಭಾ ಪುರಸ್ಕಾರ ಮತ್ತು ಸದಸ್ಯತಾ ಅಭಿಯಾನ 10

# ಸ್ವತಂತ್ರ ಭಾರತದ ವರ್ತಮಾನ–ಭವಿಷ್ಯ



**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**

ಸ್ವತಂತ್ರ ಭಾರತದ ಈಗಿನ ಕೆಲವು ಸನ್ನಿವೇಶಗಳು, ಘಟನೆಗಳನ್ನು ನೋಡಿದಾಗ ಮನಸ್ಸು ಪ್ರಕ್ಷುಬ್ಧಗೊಳ್ಳುತ್ತದೆ. ಸ್ವಾತಂತ್ರ್ಯ ಬಂದು ದಶಕಗಳೇ ಕಳೆದಿದ್ದರೂ, ಅಭಿವೃದ್ಧಿಯ ಹೆಸರನ್ನೂ ಕೇಳದ ಪ್ರದೇಶಗಳು ಇವೆ. ಸ್ವಾತಂತ್ರ್ಯದ ಹೆಸರಿನಲ್ಲಿ ದುರಾಚಾರಗಳು ನಡೆಯುತ್ತಿವೆ. ಗಡಿ–ಭಾಷೆ–ಜಾತಿಗಳ ಮಧ್ಯದಲ್ಲಿ ಪರಸ್ಪರ ವೈರತ್ವ ಬೆಳೆಸಿಕೊಂಡು, ಸಣ್ಣ ಸಣ್ಣ ವಿಷಯಕ್ಕೂ ಜಗಳವಾಡುವ ಸ್ಥಿತಿಗೆ ತಲುಪಿದೆ. ಈ ಎಲ್ಲ ಅನರ್ಥಗಳನ್ನೂ ನೋಡುತ್ತಿರುವಾಗ, ಇಂತಹ ಸ್ವತಂತ್ರ ಬೇಕಿತ್ತೆ ಎಂಬ ಸಣ್ಣ ಅನುಮಾನ ಮೂಡದೇ ಇರದು.

ಬ್ರಿಟನ್ ಸಂಸತ್ತಿನಲ್ಲಿ "Indian Independence Bill"ಬಗ್ಗೆ ವಿನ್ಸ್ಟನ್ ಚರ್ಚಿಲ್ ಹೇಳಿದ ಮಾತುಗಳು ಗಮನಾರ್ಹ. "ಒಂದು ವೇಳೆ ಭಾರತಕ್ಕೆ ಈಗ ಸ್ವಾತಂತ್ರ್ಯವನ್ನು ನೀಡಿದರೆ, ಅಧಿಕಾರವು ದುಷ್ಟರು,ಧೂರ್ತರು, ದೂರದೃಷ್ಟಿಯಿಲ್ಲದ ಬೇಜವಾಬ್ದಾರಿ ನಾಯಕರ ಕೈಗೆ ಹೋಗುತ್ತದೆ. ನಾಯಕರು ಬೆಲ್ಲದ ಮಾತನಾಡಿದರೂ ಕಹಿ ಮನಸ್ಸುಳ್ಳವರಾಗಿರುತ್ತಾರೆ. ಅಧಿಕಾರ ಲಾಲಸೆಗಾಗಿ ತಮ್ಮ ತಮ್ಮಲ್ಲೇ ಕಚ್ಚಾಡಿ ರಾಜಕೀಯ ಅಸ್ಥಿರತೆಗೆ ಕಾರಣರಾಗುತ್ತಾರೆ". ಚರ್ಚಿಲ್ ರ ಈ ಮಾತು ಅಕ್ಷರಶಃ ಸತ್ಯವಾಗಿದೆ ಎಂಬುದು ಎಲ್ಲರ ಅರಿವಿಗೆ ಬರುವಂತಹದ್ದು.

ಇತಿಹಾಸವನ್ನು ಕೆದಕಿದರೆ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಯಾವ ನಾಯಕರೂ, ಇಂದಿನ ಭಾರತವನ್ನು ಅಪೇಕ್ಷಿಸಿರಲಿಲ್ಲ. ಅವರ ಸ್ವಾತಂತ್ರ್ಯದ ಕಲ್ಪನೆ, ಕನಸುಗಳು ತುಂಬಾ ಉದಾತ್ತವೂ, ಆದರ್ಶವೂ ಆಗಿತ್ತು. ಮೂಲ ಭಾರತದ ಕಲ್ಪನೆಯೇ ನೈತಿಕ ಮೌಲ್ಯಗಳ ಮೇಲೆ ನಿಂತಿದೆ. ಭಾರತೀಯ ಸಂಸ್ಕೃತಿಯ ಉತ್ಥಾನದ ನೆರಳಿನಲ್ಲಿ ದೇಶದ ನಿರ್ಮಾಣವನ್ನು ಕಂಡಿದ್ದು ನಮ್ಮ ಹಿರಿಯರು. ವಾಸುದೇವ ಬಲವಂತ ಫಡಕೆ ಸ್ವದೇಶೀ ಬಳಕೆಯ ಕನಸು ಕಂಡಿದ್ದ. ಭಗತ್ ಸಿಂಗ್ ಪೂರ್ಣ ಸ್ವಾರಾಜ್ಯದ ಕಲ್ಪನೆಯನ್ನು ತನ್ನ ಗೆಳೆಯರಿಗೆ ವಿವರಿಸಿದ್ದ. ಸ್ವಾಮೀ ವಿವೇಕಾನಂದರ ಭಾರತವಂತೂ, ಬಲಿಷ್ಠ ತರುಣರ, ದೇಶಪ್ರೇಮಿ ನಾಯಕರ, ಗಡಿ–ಭಾಷೆ–ಜಾತಿಯನ್ನು ಮೀರಿದ ಭ್ರಾತೃತ್ವದ ದೇಶವಾಗಿತ್ತು. ತಿಲಕರು, ಸಾವರ್ಕರರು, ಅರವಿಂದರು ಕಲ್ಪಿಸಿದ ಸ್ವತಂತ್ರ ಭಾರತ, ವಿಶ್ವಶ್ರೇಷ್ಠ ದೇಶವಾಗುವ ಎಲ್ಲ ವಿಚಾರಗಳನ್ನೂ ಒಳಗೊಂಡಿತ್ತು.

ನಮ್ಮ ದೇಶದ ದುರಂತವೆಂದರೆ, ನಾವು ಸ್ವಾತಂತ್ರ್ಯದ ವ್ಯಾಖ್ಯೆಯನ್ನೇ ಮರೆತಿದ್ದೇವೆ. ಸ್ವಾತಂತ್ರ್ಯವು ಕಂಡಕಂಡಂತೆ ವರ್ತಿಸುವ ಸ್ವೇಚ್ಛಾಚಾರವಾಗಿದೆ. ಸ್ವಾತಂತ್ರ್ಯದ ಅರ್ಥ ಕೇವಲ ರಾಜಕೀಯದ್ದಲ್ಲ. ಮಾನಸಿಕ, ಸಾಂಸ್ಕೃತಿಕ, ಸಾಮಾಜಿಕ, ಬೌದ್ಧಿಕ ಹೀಗೆ ಎಲ್ಲ ಸ್ತರಗಳಲ್ಲಿಯೂ ಪರರ ಅನುಕರಣೆಯಿಲ್ಲದೆ, ನಮ್ಮತನವನ್ನು ಉಳಿಸಿಕೊಂಡು ಬೆಳೆಸುವುದು ಸ್ವಾತಂತ್ರ್ಯದ ಮೂಲ ಧ್ಯೇಯ. ಆದರೆ, ಸ್ವಾತಂತ್ರ್ಯಾನಂತರ ಆಗಿರುವುದೇ ಬೇರೆ. ಬ್ರಿಟಿಷರು ಬಿಟ್ಟು ಹೋದ ಗುಲಾಮಿ ಮಾನಸಿಕತೆ ನಮ್ಮಲ್ಲಿ ಗಾಢವಾಗಿ ಬೇರುಬಿಟ್ಟಿದೆ. ಭಾರತವನ್ನು ತುಚ್ಛವಾಗಿ ಕಾಣುವ ಮನಸ್ಥಿತಿ ಶಿಕ್ಷಣ ಪದ್ಧತಿಯಲ್ಲೇ ಅಡಗಿಹೋಗಿದೆ. ಪ್ರತಿಯೊಂದಕ್ಕೂ, ಪರದೇಶವನ್ನು ಆದರ್ಶವಾಗಿ ನೋಡುವ ನಾವು, ಭಾರತವು ಆ ಎಲ್ಲ ಔನ್ನತ್ಯಗಳನ್ನೂ ಮೀರಿತ್ತು ಎಂಬ ಸತ್ಯವನ್ನು ಮರೆತಿರುವು ವಿಷಾದನೀಯ.

ದೇಶದ ಯುವಕರ ಮುಂದೆ ಬಹಳಷ್ಟು ಸಮಸ್ಯೆಗಳಿವೆ. ಎಲ್ಲದಕ್ಕಿಂತ ಮುಖ್ಯವಾದದ್ದು ನೈತಿಕತೆ ಮತ್ತು ಪ್ರಾಮಾಣಿಕತೆಯ ಕೊರತೆ. ಈ ಸಮಸ್ಯೆಯನ್ನು ಕ್ರಮವಾಗಿ ಸುಧಾರಿಸದೆ ಹೋದಲ್ಲಿ ದೇಶವು ದಿಕ್ಕೆಟ್ಟು ಹೋಗುವುದು. ಸ್ವಾರ್ಥ ನಾಯಕರಿಂದ ಪ್ರಾರಂಭವಾದ ಭ್ರಷ್ಟಾಚಾರದ ಸ್ವರೂಪವು, ದೇಶವನ್ನು ಎಂಥ ಅಧಃಪತನಕ್ಕೆ ಕೊಂಡೊಯ್ದಿದೆ ಎಂಬುದು ಯಾರೂ ಅರಿಯದ ವಿಷಯವೇನಲ್ಲ. ಸ್ವಾತಂತ್ರ್ಯದ ಹೆಸರಿನಲ್ಲಿ ದೇಶದ ರೈತರು, ಸೈನಿಕರನ್ನೂ ಮನಬಂದಂತೆ ಅವಮಾನಿಸುವ ದ್ರೋಹಿಗಳು ನಮ್ಮ ನಡುವೆಯೇ ಇದ್ದಾರೆ ಎಂಬುದು ಗಾಬರಿ ಹುಟ್ಟಿಸುತ್ತದೆ. ಅಕ್ರಮ ನುಸುಳುಕೋರರನ್ನೂ, ಸಮಾಜಘಾತುಕರನ್ನೂ, ನಕ್ಸಲ್ ಗಳನ್ನೂ, ಉಗ್ರಗಾಮಿಗಳನ್ನೂ ವೈಭವೀಕರಿಸುವ, ಅವರ ಬಗ್ಗೆ ಮಾನವೀಯತೆ, ಅನುಕಂಪ ಎಂದು ಭಾಷಣ ಬಿಗಿಯುವ ಸಾಹಿತಿಗಳು, ಮಾಧ್ಯಮದವರು ದೇಶಕ್ಕೆ ಮಾರಕವಾಗಿದ್ದಾರೆ ಎನ್ನುವುದರಲ್ಲಿ ಸಂಶಯವೇ ಉಳಿದಿಲ್ಲ.

ಇದು ನಮ್ಮ ಸಮಯ. ದೇಶದ ಯುವಶಕ್ತಿಯು ಮುಸುಕಿನಿಂದ ಎದ್ದು ನಿಲ್ಲಬೇಕಾದ ಸಮಯ. ಅದಕ್ಕಾಗೇ ಪ್ರತಿವರ್ಷದ ಸ್ವಾತಂತ್ರ್ಯ ದಿನಾಚರಣೆಯಿರುವುದು. ದೇಶದಲ್ಲಿ ನಡೆಯುತ್ತಿರುವ ಇಂತಹ ಅಕ್ರಮಗಳನ್ನು ನಿಲ್ಲಿಸುವ, ಕನಿಷ್ಠ ಪಕ್ಷ ವಿರೋಧಿಸುವ ಮನೋಭಾವವಾದರೂ ನಮ್ಮಲ್ಲಿ ಹೊತ್ತಿಕೊಳ್ಳಬೇಕಿದೆ. ಯಾವ ಶ್ರೇಷ್ಠ, ಜಗದ್ಗುರು ಭಾರತವನ್ನು ಕನಸು ಕಂಡು, ಅದಕ್ಕಾಗಿ ತಮ್ಮ ಮನೆ–ಮಠಗಳನ್ನು ತೊರೆದು, ಜೀವನವನ್ನೇ ರಾಷ್ಟ್ರಕ್ಕಾಗಿ ಅರ್ಪಿಸಿದರೋ, ಅಂತಹ ಧೀರೋದಾತ್ತ ಸ್ವಾತಂರ್ಯ ಸೇನಾನಿಗಳ ಬಲಿದಾನಕ್ಕೆ ಅಪಮಾನವಾಗುವುದು ಬೇಡ. ಅವರ ಎಲ್ಲ ಕನಸುಗಳನ್ನು, ಆದರ್ಶಗಳನ್ನು ಪೂರ್ಣ ಮಾಡಲಾಗದಿದ್ದರೂ, ಕಡೆ ಪಕ್ಷ ಅವರು ದೊರಕಿಸಿಕೊಟ್ಟ ಸ್ವಾತಂತ್ರ್ಯಕ್ಕಾದರೂ ಬೆಲೆ ಕೊಡೋಣ. ಸ್ವೇಚ್ಛಾಚಾರಗಳನ್ನು ಮುಕ್ತಾಯಗೊಳಿಸಿ, ಸರ್ವರ–ಸಹಕಾರದ, ಸರ್ವಾಂಗೀಣ ಅಭಿವೃದ್ಧಿಯ, ಪರಸ್ಪರ ಪ್ರೀತಿಯ ಭಾರತವನ್ನು ಪುನಃ ನಿರ್ಮಿಸಲು ಈ ಸ್ವಾತಂತ್ರ್ಯ ದಿನದಂದು ಪ್ರತಿಜ್ಞೆ ಮಾಡೋಣ.

ವಂದೇ ಮಾತರಂ...

ಭೂರಮೆ

# ಸ್ತ್ರೀ ಸಾಮರ್ಥ್ಯ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

**ನಸ್ತ್ರೀಸ್ವಾತಂತ್ರ್ಯಮರ್ಹತೀ–** ಏನಿದರ ಅರ್ಥ? ಮನುಸ್ಮೃತಿಯಲ್ಲಿನ ಈ ಸಾಲುಗಳು ಎಲ್ಲರಿಗೂ ಚಿರಪರಿಚಿತ. ಇದರ ಪ್ರಾರಂಭಿಕ ಸಾಲುಗಳಾದ ಪಿತಾರಕ್ಷತಿಕೌಮಾರೇ। ಭರ್ತಾರಕ್ಷತಿಯೌವನೇ। ಪುತ್ರಾರಕ್ಷತಿ ವಾರ್ಧಕ್ಯೇ॥ ಎಂಬುದರಲ್ಲಿ ಸ್ತ್ರೀ ಬಾಲ್ಯದಲ್ಲಿ ತಂದೆಯ ರಕ್ಷಣೆಯಲ್ಲಿಯೂ, ಯೌವನದಲ್ಲಿ ಪತಿಯ ರಕ್ಷಣೆಯಲ್ಲಿಯೂ ಇದ್ದು, ವೃದ್ಧಾಪ್ಯದಲ್ಲಿ ಪುತ್ರನ ರಕ್ಷಣೆಯಲ್ಲಿರುತ್ತಾಳಾದ್ದರಿಂದ ಸ್ವಾತಂತ್ರ್ಯವನ್ನು ಹೊಂದಲು ಆಕೆಯು ಅರ್ಹಳಲ್ಲವೆಂದು ಹೇಳಿದೆ. ಆದರೆ, ಈ ಮೂರು ಹಂತಗಳಲ್ಲಿ ಆಕೆಗೆ ಆಶ್ರಯದ ಅಗತ್ಯವಿರುವುದಕ್ಕೆ ಕಾರಣ ಆಕೆಗೆ ಪ್ರಕೃತಿದತ್ತವಾಗಿರುವ ದೈಹಿಕ ಕೋಮಲತೆಯಲ್ಲದೆ ಆಕೆಯಲ್ಲಿನ ಸಾಮರ್ಥ್ಯದ ಕೊರತೆಯಲ್ಲ ಎಂಬುದನ್ನು ತಿಳಿಯಬೇಕು. ಸ್ತ್ರೀ ಸಾಂದರ್ಭಿಕವಾಗಿ ವಜ್ರದಂತೆ ಕಠಿಣಮನಸ್ಕಳಾಗುವಂತೆಯೇ ಹೂವಿನಂತೆ ಕೋಮಲ ಹೃದಯದವಳೂ ಆಗಬಲ್ಲಳೆಂಬ ವಾಸ್ತವಾಂಶವನ್ನು ಗಮನಿಸಬೇಕು. ಆಕೆಯಲ್ಲಿರುವ ಸಂಕಲ್ಪಶಕ್ತಿ, ಮಾನಸಿಕ ದಾರ್ಢ್ಯ, ಗುರಿಸಾಧಿಸುವ ಛಲ, ಕಾರ್ಯಕ್ಷಮತೆ, ತ್ಯಾಗ ಮನೋಭಾವ, ಸಹನಶೀಲತೆ, ಇಂಗಿತಜ್ಞತೆ ಮತ್ತು ಸಂವೇದನಾ ಶೀಲತೆ ಹಾಗೂ ಸಾಮರಸ್ಯದತ್ತ ಒಲವು ಎಂಬ ಒಂಬತ್ತು ಗುಣಗಳು ಅವಳ ವ್ಯಕ್ತಿತ್ವದ ಗಟ್ಟಿತನಕ್ಕೆ ಪೂರಕವಾಗುತ್ತವೆ. ಇಂತಹ ವ್ಯಕ್ತಿತ್ವದ ಫಲವಾಗಿಯೇ ಬಹುಕಾಲದಿಂದಲೂ ಸಮಾಜದ ಎಲ್ಲ (ಬಹುತೇಕ) ಕ್ಷೇತ್ರಗಳಿಗೆ ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತ ಬಂದ ಸ್ತ್ರೀಯರು ನಮ್ಮ ಇತಿಹಾಸದ ಪುಟಗಳಲ್ಲಿ ಅಪಾರ ಸಂಖ್ಯೆಯಲ್ಲಿದ್ದಾರೆ. ಹೀಗಿರುವಾಗ 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಉಕ್ತಿಯ ಅರ್ಥ ಹೀನವೆನಿಸುತ್ತದೆ.

ಯಾವುದು ಸ್ವಾತಂತ್ರ್ಯ? ಸ್ವತಂತ್ರವಾಗಿ ಆರೋಗ್ಯಕರವಾದ ಚಿಂತನೆ ಮಾಡುತ್ತ ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತ, ಸಮಾಜಮುಖಿಯಾಗಿ, ಸಮಾಜಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ಕಾರ್ಯೋನ್ಮುಖವಾಗುತ್ತ, ಪ್ರಾಮಾಣಿಕ ಪ್ರಯತ್ನಗಳ ಮೂಲಕ ಯಶಸ್ವಿಯಾದಾಗ ಆಕೆಯ ಬದುಕೂ ಸಾರ್ಥಕವಾಗುತ್ತದೆ. ಆಕೆಯ ಸ್ವಾತಂತ್ರ್ಯವೂ ಸದುಪಯೋಗ ವಾಗುತ್ತದೆ. ಕುಟುಂಬದ ಬೆನ್ನೆಲುಬಾಗಿ, ಸಮಾಜಕ್ಕೆ ಬದ್ಧಳಾಗಿ, ವ್ಯಷ್ಟಿ, ಸಮಷ್ಟಿ ಎರಡನ್ನೂ ಸಮಾನಾಂತರವಾಗಿ ಸರಿದೂಗಿಸಿಕೊಂಡು ಜವಾಬ್ದಾರಿ ನಿರ್ವಹಿಸುವ ಮಹಿಳೆಯ ಸಾಮರ್ಥ್ಯ ಅನನ್ಯವೇ ಆಗಿದೆ. ಇದರ ನಿದರ್ಶನಗಳನ್ನು ಎಲ್ಲ ಕಾಲಘಟ್ಟಗಳಲ್ಲಿಯೂ ಕಾಣಬಹುದಾದರೂ ಕೆಲವೇ ಉದಾಹರಣೆಗಳಿಂದಲೇ ಇದನ್ನು ನಿರೂಪಿಸಬಹುದು. ಪ್ರಾರಂಭದ ಹಂತದಿಂದಲೂ ಗಮನಿಸಿದರೆ ವೇದಕಾಲೀನ ಮಹಿಳೆಯರಲ್ಲಿ ಒಂದು ಸುಶಿಕ್ಷಿತ, ಸುಸಂಸ್ಕೃತ, ಸುಭದ್ರ ಸಮಾಜ ನಿರ್ಮಾಣದ ಕಾರ್ಯಕ್ಕಾಗಿ ಅಮೂಲ್ಯವಾದ ಕೊಡುಗೆಯನ್ನು ನೀಡಿರುವ ಅನೇಕರಿದ್ದಾರೆ. ಋಷಿಕೆಯರು, ವಿದ್ವಾಂಸರು, ಬ್ರಹ್ಮವಾದಿನಿಯರೂ ಆಗಿ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ತಮ್ಮ ಜ್ಞಾನಧಾರೆಯನ್ನು ಹರಿಸುತ್ತ ಲೋಕಕಲ್ಯಾಣದಲ್ಲಿ ತೊಡಗಿದ್ದ ಗಾರ್ಗಿ, ಮೈತ್ರೇಯಿ, ಲೋಪಾಮುದ್ರಾ ಮುಂತಾದ ಹಲವರು ಚಿರಸ್ಮರಣೆಯರೇ ಆಗಿದ್ದಾರೆ. ಆ ಸಾಧಕಿಯರ ವಿಚಾರಗಳನ್ನು ತಿಳಿದಾಗ 'ಕೋಮಲೆ' ಎಂಬ ಪದಕ್ಕಾಗಲೀ 'ರಕ್ಷಣೆಯಲ್ಲಿರತಕ್ಕವಳು' ಎಂಬ ನಿರ್ಧಾರಕ್ಕಾಗಲೀ ಯಾವ ಅರ್ಥವಿದೆಯೆಂದು ಅಚ್ಚರಿಯಾಗುತ್ತದೆ. ಬೌದ್ಧಿಕವಾಗಿ ಅವರೆಲ್ಲರೂ ಎಂತಹ ಮಹತ್ತ್ವದ ಸಾಧನೆಯನ್ನು ಮಾಡಿದ್ದರೆಂಬುದು ಅತಿ ಮುಖ್ಯವಾದ ಅಂಶ. ಜ್ಞಾನಕೇಂದ್ರಗಳಾಗಿದ್ದ ಗುರುಕುಲ ನಿರ್ವಹಣೆಯಲ್ಲಿಯೂ ಅವರ ಜವಾಬ್ದಾರಿ ನಿರ್ವಹಣೆ ಪ್ರಮುಖವಾಗಿಯೇ ಇರುತ್ತಿತ್ತು.

ಚರಿತ್ರೆಯ ಪುಟಗಳಲ್ಲಂತೂ ಸ್ತ್ರೀ ಸಾಮರ್ಥ್ಯದ ನೂರಾರು ಉದಾಹರಣೆಗಳನ್ನು ಕಾಣುತ್ತೇವೆ. ರಾಜಕೀಯ ಹೋರಾಟಗಳಿಗೆ ಸಂಬಂಧಿಸಿದಂತೆ ರಾಜಮನೆತನಗಳ ಅನೇಕ ಹೆಣ್ಣುಮಕ್ಕಳು ನಾಡು–ನುಡಿಯ ಸೇವೆಯಲ್ಲಿ ತೊಡಗಿ ತಮ್ಮ ಕ್ಷಾತ್ರತೇಜಸ್ಸಿನೊಂದಿಗೆ ಸಾಂಸ್ಕೃತಿಕವಾಗಿಯೂ ಕ್ರಿಯಾಶೀಲರಾಗಿದ್ದರೆಂಬುದು ತಿಳಿಯುತ್ತದೆ. ನಾಡನ್ನು ಕಟ್ಟುವ ಬೆಳೆಸುವ, ರಕ್ಷಿಸುವ ಕಾರ್ಯದಲ್ಲಿ ವೀರರಮಣೀಯರು ತೋರಿದ ಶೌರ್ಯ, ಪರಾಕ್ರಮಗಳಾಗಲೀ, ಆಡಳಿತ ನೈಪುಣ್ಯವಾಗಲೀ, ರಾಷ್ಟ್ರಪ್ರೇಮವಾಗಲೀ ಯಾವ ಪುರುಷನಿಗೂ ಕಡಿಮೆಯಿಲ್ಲದ್ದೆಂಬುದು ನಿರೂಪಿತವಾಗಿದೆ. ಅದೇ ರೀತಿಯಲ್ಲಿ ಆತ್ಮಗೌರವಕ್ಕಾಗಲೀ, ಚಾರಿತ್ರ್ಯ, ಶೀಲಕ್ಕಾಗಲೀ ಅಪಾಯವೊದಗುವ ವಿಪರೀತದ, ನಿವಾರಿಸಲಾಗದ ಸನ್ನಿವೇಶಗಳು ಎದುರಾದಾಗ ಪ್ರಾಣಾರ್ಪಣೆಗೆ ಸಿದ್ಧರಾಗಿ ಶೀಲರಕ್ಷಣೆ ಮಾಡಿಕೊಂಡ ವೀರಮಹಿಳೆಯರ ಉದಾತ್ತ ಸಂಸ್ಕೃತಿಯ ಸಂಗತಿಗಳು ಆ ಮಹಾನ್ ಚೇತನಗಳನ್ನು ಜಗದ್ವಂದ್ಯರನ್ನಾಗಿ ಮಾಡಿವೆ. ಈ ಉದಾಹರಣೆಗಳು ದೇಶದಾದ್ಯಂತ ದೊರಕುತ್ತವೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಂತೂ ಸಮಾಜದ ಎಲ್ಲ ವರ್ಗಗಳಿಂದ, ದೇಶದ ಮೂಲೆಮೂಲೆಗಳಿಂದ ಚಳುವಳಿಗಳಲ್ಲಿ ಪಾಲ್ಗೊಂಡ ಮಹಿಳೆಯರ ಸಂಖ್ಯೆ ಸಾವಿರಾರಲ್ಲ, ಲಕ್ಷಾಂತರ. ಜೈಲ್‌ಭರೋ, ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ ಮುಂತಾದ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಅವರೆಲ್ಲ ಮುನ್ನುಗ್ಗಿ ಸೇರಿದವರೇ. ಬ್ರಿಟಿಷರು ನೀಡಿದ ಮಾನಸಿಕ, ದೈಹಿಕ ಹಿಂಸೆಗಳಿಗೆ ಜಗ್ಗದೆ, ಕುಗ್ಗದೆ ತನು, ಮನ, ಧನಗಳನ್ನು ದೇಶಕ್ಕಾಗಿ ಅರ್ಪಿಸಿ ಹುತಾತ್ಮರಾದ ಮಹಿಳೆಯರ ಸಂಖ್ಯೆಗೆ ಲೆಕ್ಕವಿಲ್ಲ. ಸ್ವಯಂ ಪ್ರೇರಣೆಯಿಂದ, ರಾಷ್ಟ್ರಭಕ್ತಿಯೊಂದಿಗೆ, ರಾಷ್ಟ್ರಪ್ರೇಮದೊಂದಿಗೆ ಪ್ರಾಣಾರ್ಪಣೆ ಮಾಡಿದವರು ಕೆಲವರಾಗಿದ್ದರೆ ಮತ್ತೆ ಕೆಲವರು ರಾಷ್ಟ್ರನಾಯಕರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದವರು. ಹೋರಾಟದ ಈ ಪ್ರವಾಹಕ್ಕೆ ಧುಮುಕಿದವರಲ್ಲಿ ಗ್ರಾಮ, ನಗರಗಳೆಂಬ ಭೇದವಿರಲಿಲ್ಲ. ವಿದ್ಯಾವಂತ, ಅವಿದ್ಯಾವಂತರೆಂಬ ಅಂತರವಿರಲಿಲ್ಲ, ಹಿರಿಯ, ಕಿರಿಯರೆಂಬ ವ್ಯತ್ಯಾಸವಿರಲಿಲ್ಲ. ಅವರೆಲ್ಲರನ್ನು ಕರೆದೊಯ್ದದ್ದು, ಬಂಧಿಸಿದ್ದು 'ರಾಷ್ಟ್ರಸೇವೆ' ಎಂಬ ಏಕಸೂತ್ರ. ಈ ತ್ಯಾಗದಲ್ಲಿ ಪಾಲ್ಗೊಂಡು ಎಲ್ಲರ ಗಮನಕ್ಕೆ ಬಂದವರು ಕೆಲವರು ಮಾತ್ರವಾದರೆ, ಹೀಗೆ ತಮ್ಮ ಪಾಲಿನ ಋಣವನ್ನು ಸಲ್ಲಿಸಿ ಸದ್ದಿಲ್ಲದೆ ತೆರೆಮರೆಗೆ ಸಂದು ಹೋದವರಿಗೆ ಲೆಕ್ಕವೇ ಇಲ್ಲ. ಸ್ವತಃ ಪಾಲ್ಗೊಂಡಿದ್ದರ ಜೊತೆಗೆ ಇತರರಿಗೆ ಪ್ರೇರಕ ಶಕ್ತಿಯಾಗಿ ದೇಶಸೇವೆಯಲ್ಲಿ ಭಾಗಿಯಾಗಲು ಹುರಿದುಂಬಿಸುತ್ತ ರಾಷ್ಟ್ರೀಯತೆಯ ಭಾವವನ್ನು ಮೂಡಿಸುವ ಕಾರ್ಯದಲ್ಲಿ ಕೂಡ ಮಹಿಳೆಯರ ಪಾತ್ರ ದೊಡ್ಡದೇ. ಹೀಗೆ, ತಾಯ್ನೆಲದ ರಕ್ಷಣೆಯಲ್ಲಿ,

ಪುಟ 9 ಕ್ಕೆ ➢

# ರಾಜ್ಯ ಕಾರ್ಯಕಾರಿಣಿ ಸಭೆ

ದಿನಾಂಕ 22.7.2018 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆ ಯಾದವಸ್ಮೃತಿ ಬೆಂಗಳೂರಿನಲ್ಲಿ ನಡೆಯಿತು. ಸಭೆಯು ಸರಸ್ವತಿದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ದೀಪ ಬೆಳಗುವುದರೊಂದಿಗೆ ಆರಂಭವಾಯಿತು. ಸಭೆಯಲ್ಲಿ ಸಂಘದ ಹಿರಿಯರು, ಎ.ಬಿ.ಆರ್.ಎಸ್.ಎಂ ನ ಸಂರಕ್ಷಕರಾದ ಶ್ರೀ ಕೃ ನರಹರಿ ಜೀ, ಎ.ಬಿ.ಆರ್.ಎಸ್.ಎಂ ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಶ್ರೀ ಶಿವಾನಂದ ಸಿಂಧನಕೇರಾ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಅರುಣ್ ಶಹಾಪುರ ಎಂ.ಎಲ್.ಸಿ, ಶ್ರೀ ಅ. ದೇವೇಗೌಡ ಶಾಸಕರು, ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ, ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲ್, ಸಹ ಪ್ರಧಾನ ಕಾರ್ಯದರ್ಶಿ ಶ್ರೀ ಗಂಗಾಧರಾಚಾರಿ ಹಾಗೂ ರಾಜ್ಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರನ್ನೂ ಸಹ ಪ್ರಧಾನ ಕಾರ್ಯದರ್ಶಿ ಶ್ರೀ ಗಂಗಾಧರಾಚಾರಿ ಸ್ವಾಗತಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ರಾಜ್ಯ ಪದಾಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡ ನಂತರ ಕಳೆದ ಕಾರ್ಯಕಾರಿಣಿಯಿಂದ ಇಲ್ಲಿಯವರೆಗಿನ ಸಂಘದ ಕಾರ್ಯಕ್ರಮಗಳ ಕುರಿತು ಜಿಲ್ಲಾವಾರು, ಸಂಕ್ಷಿಪ್ತ ವರದಿಯನ್ನು ಆಯಾ ಜಿಲ್ಲೆಗಳ ಅಧ್ಯಕ್ಷರು ತಿಳಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಅ. ದೇವೆಗೌಡ ಇವರು ತಮ್ಮನ್ನು ಶಾಸಕರಾಗಿ ಆಯ್ಕೆ ಮಾಡುವಲ್ಲಿ ಶ್ರಮಿಸಿದ ಎಲ್ಲ ಕಾರ್ಯಕರ್ತರು ಮತ್ತು ಆಶೀರ್ವದಿಸಿದ ಹಿರಿಯರಿಗೆ ತಮ್ಮ ವಂದನೆಗಳನ್ನು ತಿಳಿಸಿ, ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಾವು ಸದಾ ಕಾರ್ಯತತ್ಪರರಾಗಿರುವೆ ಮತ್ತು ಶಿಕ್ಷಕರ ಬೆಂಬಲಕ್ಕೆ ಸದಾ ಸಿದ್ಧವಿರುವೆ ಎಂದು ತಿಳಿಸಿದರು. ಸಭೆಯಲ್ಲಿ ಸಂಘದ 2017–18ನೇ ಸಾಲಿನ ಖರ್ಚು, ವೆಚ್ಚಗಳ ಲೆಕ್ಕಪತ್ರವನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಖಜಾಂಚಿಗಳಾದ ಶ್ರೀ ಜೆ.ಎಂ ಜೋಷಿಯವರು ವಿಸ್ತೃತವಾಗಿ ತಿಳಿಸಿದರು. ಎಲ್ಲ ಪದಾಧಿಕಾರಿಗಳು ಓಂ ಹೇಳುವುದರ ಮೂಲಕ ಒಪ್ಪಿಗೆಯನ್ನು ಸೂಚಿಸಲಾಯಿತು.

ಪ್ರೊ|| ಕೃ. ನರಹರಿಯವರು ಸಭೆಯಲ್ಲಿ ಸಂಘದ ಬಲವರ್ಧನೆಗೆ ಶಿಕ್ಷಕರನ್ನು ಇಂದಿನ ಬದಲಾವಣೆಗಳಿಗೆ ಸಜ್ಜುಗೊಳಿಸುವಂತಹ ಕಾರ್ಯಕ್ರಮಗಳಾದ Orientation program, content enrichment program, universal values, professional ethics, stress and time management, personality development ಇನ್ನಿತರ ಹಲವಾರು ಕಾರ್ಯಯೋಜನೆಗಳೊಂದಿಗೆ ಸಂಘಕ್ಕೆ ಹೆಚ್ಚಿನ ಶಿಕ್ಷಕ ಸದಸ್ಯರನ್ನು ಜೋಡಿಸುವ ಕೆಲಸ ಎಲ್ಲರಿಂದ ಆಗಬೇಕು ಎಂದು ಸೂಚಿಸಿದರು.

ಅಕ್ಟೋಬರ್ 5, 6 ಮತ್ತು 7 2018ರಂದು ಇಂದೋರ್, ಮಧ್ಯಪ್ರದೇಶದಲ್ಲಿ ನಡೆಯಲಿರುವ ಎ.ಬಿ.ಆರ್.ಎಸ್.ಎಂ ನ ರಾಷ್ಟ್ರೀಯ ಅಧಿವೇಶನದಲ್ಲಿ ಪಾಲ್ಗೊಳ್ಳುವುದರ ಕುರಿತು ಚರ್ಚಿಸಲಾಯಿತು. ಪ್ರತಿ ಜಿಲ್ಲೆಯಿಂದ 7 ಜನ ಪದಾಧಿಕಾರಿಗಳು ಕಡ್ಡಾಯವಾಗಿ ಅಧಿವೇಶನದಲ್ಲಿ ಪಾಲ್ಗೊಳ್ಳುವಂತೆ ಸೂಚಿಸಿ, ಅದಕ್ಕೆ ಬೇಕಾದ ವ್ಯವಸ್ಥೆಗಳ ಕುರಿತು ಜಿಲ್ಲಾವಾರು ಮಾಹಿತಿ ಪಡೆಯಲಾಯಿತು.

ಮಧ್ಯಾಹ್ನದ ಅವಧಿಯಲ್ಲಿ ವಿಭಾಗವಾರು ಪದಾಧಿಕಾರಿಗಳ ಬೈಠಕ್ ನಡೆಯಿತು. ಮುಂದಿನ ದಿನಗಳಲ್ಲಿ ನಡೆಸಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು. ಆಯಾ ಜಿಲ್ಲೆಗಳಲ್ಲಿ ಆಗಸ್ಟ್ 1 ರಿಂದ 10ನೇ ತಾರೀಖಿನೊಳಗೆ ಗುರುವಂದನಾ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

ನಂತರದ ಅವಧಿಯಲ್ಲಿ ಶ್ರೀ ಅರುಣ್ ಶಹಾಪೂರರೊಂದಿಗೆ ಶಿಕ್ಷಣ ಮತ್ತು ಶಿಕ್ಷಕರ ಸದ್ಯದ ಅತೀ ಮಹತ್ವದ ವಿಷಯಗಳ ಕುರಿತು ಚರ್ಚಿಸಲಾಯಿತು. ಚರ್ಚೆಗೆ ಒಳಗೊಂಡ ಪ್ರಮುಖ ವಿಷಯಗಳು

- ಶಿಕ್ಷಕ ವರ್ಗಾವಣೆ ವಿಳಂಬವಾಗಲು ಕಾರಣ, ಸದ್ಯದ ಸ್ಥಿತಿ.
- 6ನೇ ವೇತನ ಆಯೋಗದ ಶಿಫಾರಸ್ಸಿನಲ್ಲಿ ಉಂಟಾದ ಗೊಂದಲಗಳು
- ಎನ್.ಪಿ.ಎಸ್ ರದ್ದತಿ, ಒ ಪಿ ಎಸ್ ಜಾರಿ
- 2008ರ ನಂತರ ನೇಮಕಗೊಂಡ ಹಾಗೂ ಬಡ್ತಿ ಹೊಂದಿದ ಶಿಕ್ಷಕರ 400ರೂ ಗಳ ವಿಶೇಷ ವೇತನ ಭತ್ಯೆ ಮುಂದುವರೆಸುವುದು.
- ಕಾಲ್ಪನಿಕ ವೇತನ ಬಡ್ತಿ
- ರಾಜ್ಯ ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೂ ಎನ್.ಪಿ ಎಸ್ ಸೌಲಭ್ಯವನ್ನು ಕಲ್ಪಿಸುವುದು.
- ಬಡ್ತಿಯಲ್ಲಿ ಹಿಂದಿನ ಶಿಕ್ಷಕರ ಬಗ್ಗೆ ಗೊಂದಲ ಹಾಗೂ ಪ್ರಸ್ತುತ ಇರುವ ಸ್ಥಿತಿ ಮತ್ತು ಅಡೆತಡೆಗಳು ಇನ್ನಿತರ ಪ್ರಮುಖ ವಿಷಯಗಳ ಕುರಿತು ಶಿಕ್ಷಕ ಪದಾಧಿಕಾರಿಗಳು ಶ್ರೀ ಅರುಣ ಶಹಾಪೂರ್ ರವರೊಂದಿಗೆ ಚರ್ಚಿಸಿದರು. ಶ್ರೀ ಅರುಣ ಶಹಾಪುರರವರು ಎಲ್ಲರ ಸಮಸ್ಯೆಗಳನ್ನು ಆಲಿಸಿ, ಸರ್ಕಾರದ ಸದ್ಯದ ನಿಲುವುಗಳು, ನಿಯಮಗಳು ಹಾಗೂ ಅವುಗಳ ಕುರಿತು ಶಿಕ್ಷಣ ಸಚಿವರಾದ ಶ್ರೀ ಎನ್ ಮಹೇಶ್ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮತ್ತು ಸಂಬಂಧಪಟ್ಟ ಇಲಾಖೆ, ಅಧಿಕಾರಿಗಳ ಗಮನಕ್ಕೆ ತರುವಲ್ಲಿ ಅವರ ಯೋಚನೆಗಳನ್ನು ತಿಳಿಸಿದರು.

ಸಭೆಯ ಸಮಾರೋಪದ ಅವಧಿಯಲ್ಲಿ ಶ್ರೀ ಶಿವಾನಂದ ಸಿಂಧನಕೇರಾರವರು ಸಂಘದ ಮೂಲ ಧ್ಯೇಯೋದ್ದೇಶ ಹಾಗೂ ಹಿರಿಯರು ಹಾಕಿದ ಮಾರ್ಗದಲ್ಲಿ ಇನ್ನೂ ಸಂಘವನ್ನು ಬಲಗೊಳಿಸಬಲ್ಲ ಸದಸ್ಯತಾ ಅಭಿಯಾನವನ್ನು ಎಲ್ಲಾ ಪದಾಧಿಕಾರಿಗಳು ಪರಿಣಾಮಕಾರಿಯಾಗಿ ಕೈಗೊಳ್ಳಲು ತಿಳಿಸಿದರು. ಗುರುವಂದನಾ ಕಾರ್ಯಕ್ರಮದ ಆಚರಣೆ ಅದರ ಮಹತ್ವವನ್ನು ಕುರಿತು ತಿಳಿಸಿ, ಸಂಘವನ್ನು ಇನ್ನೂ ಉನ್ನತವಾಗಿ ಕಟ್ಟಿ ಬೆಳೆಸಲು ಎಲ್ಲರ ಶ್ರಮ ಹಾಗೂ ಕಾರ್ಯತತ್ಪರತೇ ಮುಖ್ಯವೆಂದು ತಿಳಿಸಿದರು.

ಅಂತಿಮವಾಗಿ ಕಾರ್ಯಕ್ರಮದಲ್ಲಿ ಕೈಗೊಂಡ ನಡಾವಳಿಗಳನ್ನು ಸಭೆಗೆ ತಿಳಿಸಿ ಒಪ್ಪಿಗೆ ಪಡೆಯಲಾಯಿತು. ಶ್ರೀ ವರದರಾಜು, ಬೆಂಗಳೂರು ಗ್ರಾಮಾಂತರ ವಿಭಾಗದ ಪ್ರಮುಖರವರು ಉಪಸ್ಥಿತರಿದ್ದ ಎಲ್ಲಾ ಪ್ರಮುಖರಿಗೂ ಹಾಗೂ ಪದಾಧಿಕಾರಿಗಳಿಗೆ ವಂದನೆಗಳನ್ನು ತಿಳಿಸಿದರು. ಸಭೆಯು ಶಾಂತಿ ಮಂತ್ರದೊಂದಿಗೆ ಮುಕ್ತಾಯಗೊಂಡಿತು.

**ವರದಿ : ಶ್ರೀಮತಿ ರೇಣುಕಾ ಹಂಗನಹಳ್ಳಿ**

# ರಾಷ್ಟ್ರೀಯತೆ ಮೂಡಿಸುವಲ್ಲಿ ಶಿಕ್ಷಕರ ಪಾತ್ರ

■ **'ಶ್ವೇತಾದ್ರಿ'**, ನಿವೃತ್ತ ಮುಖ್ಯಶಿಕ್ಷಕರು

ಮಗು ಜನಿಸಿದ ಕ್ಷಣದಿಂದಲೇ ತಾಯಿಯ ಮೇಲೆ ಪ್ರೀತಿ ಮೊದಲಾಗುತ್ತದೆ. ಕ್ರಮೇಣ ತನ್ನ ತಂದೆ, ಕುಟುಂಬದ ಸದಸ್ಯರ ಬಗೆಗೆ ಬಾಂಧವ್ಯ ಬೆಳೆಯುತ್ತದೆ. ತನ್ನ ಬಂಧುಬಳಗದವರ ಬಗ್ಗೆ ಅಭಿಮಾನವನ್ನು ಹೊಂದುತ್ತದೆ. ಮಗು ಶಾಲೆಗೆ ಸೇರಿದ ಮೇಲೆ ತನ್ನ ಶಾಲೆ, ಶಿಕ್ಷಕರು, ಗೆಳೆಯರೊಂದಿಗೆ ಸ್ನೇಹಭಾವವನ್ನು ಬೆಳೆಸಿಕೊಳ್ಳುತ್ತದೆ. ಹಂತಹಂತವಾಗಿ ತಾನು ವಾಸಿಸುವ ಊರು, ರಾಜ್ಯಗಳ ಬಗೆಗೂ ಮಮಕಾರ ಸಹಜವಾಗಿ ಮೂಡುತ್ತದೆ. ಅಂತೆಯೇ ತನ್ನ ದೇಶದ ಬಗೆಗೂ ಅಭಿಮಾನವನ್ನು ಹೊಂದಬೇಕು. ಮಗುವಿಗೆ ತಾಯಿಯನ್ನು ಪ್ರೀತಿಸುವಂತೆ ಯಾರೂ ಹೇಳಿಕೊಡುವುದಿಲ್ಲ. ತನ್ನಷ್ಟಕ್ಕೆ ತಾನೇ ಅವರ್ಣನೀಯವಾಗಿ ಪ್ರೀತಿ, ಗೌರವಗಳು ಮೂಡುತ್ತವೆ. ಕುಟುಂಬದ ಸದಸ್ಯರ ಬಗೆಗೆ ಬಾಂಧವ್ಯ ಬೆಸೆಯಲು ತಾಯಿ ನೆರವಾಗುತ್ತಾಳೆ. ಸುತ್ತಲ ಪರಿಸರ, ವಿಶೇಷವಾಗಿ ಶಾಲೆ ಸಮಾಜ ಹಾಗೂ ದೇಶದ ಬಗ್ಗೆ ಮಗುವಿಗೆ ಪ್ರೀತಿ, ಗೌರವ, ಹೆಮ್ಮೆಯ ಭಾವನೆಗಳು ಮೂಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಸಮಾಜದಲ್ಲಿ ತಾಯಿಗೆ ಅತ್ಯಂತ ಉನ್ನತ ಸ್ಥಾನ. 'ಮಾತೃ ದೇವೋ ಭವ'ಎಂದು ಗೌರವಿಸಲಾಗುತ್ತದೆ. ತಾಯಿಗೆ ಸಮಾನವಾದ ಸ್ಥಾನ ದೇಶ, ಭಾಷೆಗೆ. "ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ" – ಈ ಮಾತು ಜನ್ಮಭೂಮಿ(ದೇಶ)ದ ಬಗೆಗೆ ನಮ್ಮ ಪೂರ್ವಿಕರು ಹೊಂದಿದ್ದ ಪೂಜ್ಯ ಭಾವನೆಯ ದ್ಯೋತಕ. ನಮ್ಮ ದೇಶ ನಮಗೆ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಉದ್ಯೋಗ ಹೀಗೆ ಎಲ್ಲವನ್ನೂ ಕೊಡುತ್ತದೆ. ಈ ಎಲ್ಲದರ ಋಣ ನಮಗೆ ಸದಾ ಇರುತ್ತದೆ. ಹಾಗಾಗಿ ನಾವು ದೇಶಕ್ಕೆ ಸದಾ ಋಣಿಗಳಾಗಿದ್ದು ದೇಶಕ್ಕೆ ಯಾವುದೇ ಆಪತ್ತು ಎದುರಾಗದಂತೆ ಎಚ್ಚರ ವಹಿಸಬೇಕಾದುದು ಎಲ್ಲರ ಕರ್ತವ್ಯ. ಅಷ್ಟೇ ಅಲ್ಲದೆ ದೇಶದ ಸರ್ವತೋಮುಖ ಏಳಿಗೆಯಲ್ಲಿ ಭಾಗಿಗಳಾಗಬೇಕಾದುದು ಅವಶ್ಯ. ಹಾಗಾಗಬೇಕಾದರೆ ಪ್ರತಿಯೊಬ್ಬರಲ್ಲೂ ದೇಶಾಭಿಮಾನ ಇರಲೇಬೇಕಲ್ಲವೇ?

ವೇದ, ಉಪನಿಷತ್ತು, ಪುರಾಣಗಳ ಕಾಲದಿಂದಲೂ ಭಾರತ ಸಂಪದ್ಭರಿತ ದೇಶ. ಪ್ರಕೃತಿ ನೀಡಬಹುದಾದ ಎಲ್ಲ ಸಂಪತ್ತು, ಸೌಂದರ್ಯಗಳಿಂದ ಕೂಡಿ ಸ್ವರ್ಗ ಸಮಾನವಾಗಿತ್ತು. ಋಷಿ, ಮುನಿಗಳಾದಿಯಾಗಿ ನಮ್ಮ ಪೂರ್ವಿಕರ ಬೌದ್ಧಿಕ ಮಟ್ಟ ಅತ್ಯುನ್ನತವಾಗಿತ್ತು. ಆದ್ದರಿಂದಲೇ ವಿಜ್ಞಾನದಲ್ಲಿ ಅನೇಕ ಸಂಶೋಧನೆಗಳನ್ನು ಮಾಡಿ ಸಂಶಯಗಳಿಗೆ ಪರಿಹಾರ ನೀಡಿದ್ದಾರೆ. ನೌಕಾಯಾನ, ಖಗೋಳಶಾಸ್ತ್ರ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಶರೀರಶಾಸ್ತ್ರಗಳಲ್ಲಿ ಭಾರತೀಯರ ಸಾಧನೆ ಅಪ್ರತಿಮವಾದುದು. ಭಾರತದ ಸಾಹಿತ್ಯ, ಇತಿಹಾಸಗಳು ಎಂಥವರಲ್ಲೂ ಹೆಮ್ಮೆಯ ಭಾವನೆ ಮೂಡಿಸುವುದರಲ್ಲಿ ಅನುಮಾನವೇ ಇಲ್ಲ. ಪ್ರಾಚೀನ ಭರತವು ವಿಶ್ವದ ಅತ್ಯಂತ ಶ್ರೀಮಂತ ರಾಷ್ಟ್ರವೆಂಬ ಹೆಗ್ಗಳಿಕೆ 17ನೇ ಶತಮಾನದವರೆಗೂ ಇತ್ತು. ಅನಂತರ ವಿದೇಶಿಯರ ದಾಳಿಗಳಿಂದಾಗಿ ಭಾರತದ ಸಂಪತ್ತೆಲ್ಲವೂ ಧೂಳೀಪಟವಾಯಿತು. ಭಾರತೀಯ ಸಂಸ್ಕೃತಿಯು ಅತ್ಯುನ್ನತ ಮಟ್ಟದ್ದಾಗಿದ್ದು ವಿದೇಶಗಳಮೇಲೆ ಪ್ರಭಾವ ಬೀರಿದೆ, ಬೀರುತ್ತಿದೆ. ಎಲ್ಲ ದೃಷ್ಟಿಕೋನಗಳಿಂದಲೂ ಭಾರತ ಹೆಮ್ಮೆಯ ರಾಷ್ಟ್ರವೇ ಸರಿ. ದೇಶಾಭಿಮಾನ ಭಾರತೀಯರ ರಕ್ತದ ಕಣಕಣಗಳಲ್ಲೂ ಚಿಮ್ಮಿ, ಮೈ ನವಿರೇಳಿಸುವ ಸಾಹಸಗಾಥೆಗಳು ನಮ್ಮ ಇತಿಹಾಸದಲ್ಲಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಪ್ರಾಣಾರ್ಪಣೆ ಮಾಡಿದ ವೀರರ ಸಾಹಸಗಳು ರೋಮಾಂಚನಗೊಳಿಸುತ್ತವೆ, ಮೈಯಲ್ಲಿ ಮಿಂಚಿನ ಸಂಚಾರ ಹರಿಸುತ್ತದೆ. ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿ ಪ್ರಾಣಾರ್ಪಣೆಗೈದ ರಾಷ್ಟ್ರಭಕ್ತರ ಈ ನಾಡಿನಲ್ಲಿ ವಿದೇಶಿಯರ ಆಗಮನದಿಂದ ಪರಿಸ್ಥಿತಿ ಬೇರೆಯದೇ ಆಗತೊಡಗಿತು. ವಿಶೇಷವಾಗಿ ಬ್ರಿಟಿಷರ ಆಗಮನ, ಪ್ರಭಾವದಿಂದಾಗಿ ಭಾರತೀಯರು ತಮ್ಮತನವನ್ನು ಮರೆಯುತ್ತಾ, ಕಳೆದುಕೊಳ್ಳುತ್ತಾ ಬಂದರು. ಬ್ರಿಟಿಷರ ಶಿಕ್ಷಣ ನೀತಿ, ಆಡಳಿತ ನೀತಿಗಳಿಂದಾಗಿ ಭಾರತೀಯರು ತಮ್ಮ ದೇಶದ ಬಗೆಗೆ ಅಭಿಮಾನವನ್ನು ಕಳೆದುಕೊಳ್ಳಲಾರಂಭಿಸಿದರು. ಭಾರತದಲ್ಲಿ ಹುಟ್ಟಿ ಬೆಳೆದು, ಇಲ್ಲಿ ಶಿಕ್ಷಣವನ್ನು ಪಡೆದು ಭಾರತೀಯವಾದುದೆಲ್ಲದರ ಬಗ್ಗೆ ತಾತ್ಸಾರ ಮನೋಭಾವ ಮೂಡಿಸಿಕೊಂಡು ವಿದೇಶದಲ್ಲಿ ನೆಲೆಸಿ, ವಿದೇಶೀಯವಾದುದನ್ನು ಹೊಗಳುವ ಪರಿಸ್ಥಿತಿಯನ್ನು ಈಗಿನ ಬಹಳಷ್ಟು ಯುವಕರಲ್ಲಿ ಕಾಣುವಂತಾಗಿದೆ. ಈ ಪರಿಸ್ಥಿತಿ ಬದಲಾಗಿ ಯುವಕರು ಭಾರತದ ಬಗಗೆ ಹೆಮ್ಮೆ, ಅಭಿಮಾನ ಪಡುವಂತೆ ಮಾಡಿ ಅವರಿಂದ ದೇಶದ ಅಭಿವೃದ್ಧಿಯಾಗುವಂತೆ ಮಾಡುವ ಗುರುತರವಾದ ಹೊಣೆ ಶಿಕ್ಷಕರದು ಎಂದರೆ ತಪ್ಪಾಗಲಾರದು.

ವಿದ್ಯಾರ್ಥಿಗಳಿಗೆ ಸಹಜವಾಗಿ ತಮ್ಮ ಗುರುಗಳ ಬಗೆಗೆ ವಿಶೇಷವಾದ ಪ್ರೀತಿ ಇರುತ್ತದೆ. ಗುರುಗಳ ಬೋಧನೆ ಬಹುಬೇಗ ಮನದಟ್ಟಾಗುತ್ತದೆ. ಶಿಕ್ಷಕರು ತಮ್ಮ ಶಿಷ್ಯರ ವಿಶ್ವಾಸದ ಸದ್ಬಳಕೆ ಮಾಡಿಕೊಂಡು ದೇಶದ ಬಗೆಗೆ ಅಭಿಮಾನ, ಹೆಮ್ಮೆ ಮೂಡಿಸುವ ಕಾರ್ಯದಲ್ಲಿ ಪ್ರವೃತ್ತರಾದರೆ ಖಂಡಿತ ಯಶಸ್ಸು ಪಡೆಯುವುದರಲ್ಲಿ ಅನುಮಾನವಿಲ್ಲ. ಈ ಕೆಲಸ ಇತಿಹಾಸ ಶಿಕ್ಷಕರಿಗೆ ಮಾತ್ರ ಸಾಧ್ಯ ಎಂಬ ಭಾವನೆ ಹೊಂದದೆ ಎಲ್ಲ ವಿಷಯಗಳ ಬೋಧಕರೂ ತಮ್ಮ ಬೋಧನೆಯ ವಿಷಯಗಳಲ್ಲಿ ರಾಷ್ಟ್ರಪ್ರಜ್ಞೆಯನ್ನು ಬೆಳೆಸುವ ಪ್ರಯತ್ನದಲ್ಲಿ ನಿರತರಾಗುವುದು ಅಗತ್ಯ. ಗಣಿತ, ವಿಜ್ಞಾನ ವಿಷಯಗಳ ಬೋಧಕರು ಪಠ್ಯಪುಸ್ತಕದಲ್ಲಿರುವ ಅಂಶಗಳ ಜೊತೆಗೆ ಭಾರತೀಯರ ಸಾಧನೆಗಳನ್ನೂ ಪರಿಚಯಿಸಿದಾಗ ನಮ್ಮ ದೇಶದವರ ಸಾಧನೆಗಳ ಬಗ್ಗೆ ಸಹಜವಾಗಿ ಹೆಮ್ಮೆ ಮೂಡುತ್ತದೆ. ಸಮಾಜವಿಜ್ಞಾನ ಹಾಗೂ ಭಾಷಾಬೋಧಕರು ಭಾರತೀಯ ವೀರರ ಸಾಹಸದ ಗಾಥೆಗಳ ಪರಿಚಯ ಮಾಡಿಸಬಹುದು. ಅವರ ಭಾವಚಿತ್ರಗಳನ್ನು ಪ್ರದರ್ಶಿಸಬಹುದು. ಭಾರತೀಯ ಸಾಧಕರು, ವೀರರು, ಸಾಹಿತ್ಯ ಸಾಧಕರ ಬಗೆಗಿನ ಕೃತಿಗಳನ್ನು ವಿದ್ಯಾರ್ಥಿಗಳು ಓದುವಂತೆ ಪ್ರೋತ್ಸಾಹಿಸಬಹುದು. ಚರ್ಚಾಸ್ಪರ್ಧೆ, ಪ್ರಬಂಧಸ್ಪರ್ಧೆ, ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ದೇಶಾಭಿಮಾನ ಜಾಗೃತಗೊಳಿಸಬಹುದು. ರಾಷ್ಟ್ರೀಯ ದಿನಾಚರಣೆಗಳ ಸಂದರ್ಭದಲ್ಲಿ ಗಣ್ಯವ್ಯಕ್ತಿಗಳಿಂದ ಭಾಷಣಗಳನ್ನು ಏರ್ಪಡಿಸುವುದರ ಜೊತೆಗೆ ವಿದ್ಯಾರ್ಥಿಗಳಿಂದ ಭಾರತೀಯ ಸಾಧಕರ ಬಗೆಗೆ ಕಿರುನಾಟಕಗಳನ್ನು ಮಾಡಿಸಬಹುದು. ಇದಲ್ಲದೆ ಶಿಕ್ಷಕರು ತಮ್ಮ ಪ್ರತಿಭೆ ಬಳಸಿಕೊಂಡು ಸೂಕ್ತವಾದ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿ, ವಿದೇಶದ್ದೆಲ್ಲ ಶ್ರೇಷ್ಠ, ಸ್ವದೇಶದ್ದೆಲ್ಲ ತ್ಯಾಜ್ಯ ಎಂಬ ಮನೋಭಾವ ಬದಲಾಗಿ ಯುವಕರಲ್ಲಿ ಸ್ವದೇಶ ಹಿರಿಮೆಯನ್ನು ಪುನರ್‌ಸ್ಥಾಪಿಸಲು ಪ್ರಯತ್ನ ಮಾಡಬೇಕಾಗಿದೆ. ದೇಶದ ಅಭ್ಯುದಯದಲ್ಲಿ ತನ್ನ ಕಾಣಿಕೆಯೂ ಇರಬೇಕು ಎಂಬ ಮನೋಭಾವ ವಿದ್ಯಾರ್ಥಿಗಳಲ್ಲಿ ಮೂಡಿಸಿ ಭಾರತದ ಹಿರಿಮೆಯನ್ನು ಹೆಚ್ಚಿಸಲು ನಮ್ಮ ಕಾಣಿಕೆಯನ್ನು ನೀಡೋಣ. ●

# ನಾಗರ ಪಂಚಮಿ ನವಚೇತನಗಳ ಆಗರ

ಭಾರತದಲ್ಲಿ ಆಚರಿಸಲ್ಪಡುವ ಹಬ್ಬಗಳು ಧಾರ್ಮಿಕ, ಸಾಂಸ್ಕೃತಿಕ, ಬೌದ್ಧಿಕ ಆತ್ಮೋನ್ನತಿಗೆ ಸಹಕಾರಿಗಳಾಗಿದ್ದು, ಬಹುತೇಕ ಹಬ್ಬಗಳು ಶ್ರಾವಣ ಮಾಸದಲ್ಲೇ ಪ್ರಾರಂಭವಾಗುವುದು ವಿಶೇಷ. ಪ್ರತಿವರ್ಷ ಶ್ರಾವಣ ಮಾಸದ ಶುಕ್ಲಪಕ್ಷದ ಐದನೇ ದಿನ ಆಚರಿಸುವ ಹಬ್ಬವೇ 'ನಾಗರಪಂಚಮಿ' ಈ ಹಬ್ಬದ ನಂತರವೇ 'ರಕ್ಷಬಂಧನ, ಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ, ದಸರಾ, ದೀಪಾವಳಿ ಹೀಗೆ ಸಾಲು ಸಾಲಾಗಿ ಚೇತೋಹಾರಿ ಹಬ್ಬಗಳನ್ನು ಒಂದರ ನಂತರ ಒಂದರಂತೆ ಆಚರಿಸುತ್ತೇವೆ.

'ನಾಗರಪಂಚಮಿ' ಹಬ್ಬ ಆಚರಿಸುವ ಕುರಿತಾಗಿ ಪೌರಾಣಿಕ ಹಿನ್ನೆಲೆ ಇದೆ. ಅದರಲ್ಲಿ ಬಹಳ ಪ್ರಸಿದ್ಧವಾದುದು ದ್ವಾಪರಯುಗದಲ್ಲಿ ಯಮುನೆಯಲ್ಲಿ ವಾಸವಾಗಿ ಸುತ್ತಲಿನ ಪರಿಸರಕ್ಕೆ, ಜನರಿಗೆ ಕಂಟಕವಾಗಿದ್ದ ಕಾಳಿಂಗನನ್ನು ಮರ್ದಿಸಿ ಆತನಿಗೆ ಜೀವಭಿಕ್ಷೆ ನೀಡಿದ ದಿನವೇ ಪಂಚಮಿ ತಿಥಿಯಾಗಿದೆ. ಇನ್ನೂ ಕೆಲವು ನಂಬಿಕೆಯಂತೆ, ಹಿಂದೆ ಜನಮೇಜಯ ಎಂಬ ಮಹಾರಾಜ ತನ್ನ ತಂದೆ ಪರೀಕ್ಷಿತ ರಾಜನ ಸಾವಿಗೆ ಹಾವು ಕಾರಣ ಎಂದು ತಿಳಿದು ಭೂಲೋಕದಲ್ಲಿರುವ ಸರ್ಪಸಂಕುಲವನ್ನೆಲ್ಲ ನಾಶಮಾಡುವ ಶಪಥಮಾಡಿ "ಸರ್ಪಯಜ್ಞ ಮಾಡುತ್ತಿರಲು, ಆಸ್ತಿಕರು ಎಂಬ ಋಷಿಯ ಮನವೊಲಿಕೆಯ ಪರಿಣಾಮ, ಅರ್ಧದಲ್ಲೇ ಈ ಸರ್ಪಯಜ್ಞವನ್ನು ನಿಲ್ಲಿಸಲು ನಿಶ್ಚಯಿಸಿದ ದಿನವೇ ಶ್ರಾವಣ ಶುಕ್ಲ ಪಂಚಮಿಯಾಗಿತ್ತು. ಹೊಸ ಬದುಕು ದೊರೆತ ನಾಗಗಳ ಆರಾಧನೆಯನ್ನು ಮಾಡುವ ಮೂಲಕ ಅವುಗಳನ್ನು ಸಂಪ್ರೀತ ಗೊಳಿಸಬಹುದೆಂಬ ಪ್ರತೀತಿ ಕೂಡ ಉಂಟು. ಹೆಚ್ಚಾಗಿ ಪ್ರಚಲಿತವಾಗಿರುವ ಕಥೆಯೊಂದರ ಪ್ರಕಾರ ಹಾವು ಕಚ್ಚಿ ಮಡಿದ ತನ್ನ ಸಹೋದರನನ್ನು ಬದುಕಿಸಿಕೊಂಡ ಸಹೋದರಿಯ ಅನನ್ಯ ಭಕ್ತಿಯ, ಭ್ರಾತೃತ್ವದ ಸಂಕೇತವಾಗಿಯೂ ಈ ಹಬ್ಬ ಆಚರಣೆಗೊಳ್ಳುವುದು ವಿಶೇಷ.

ಜನರು ಶ್ರದ್ಧಾಭಕ್ತಿಯಿಂದ ನಾಗರಪಂಚಮಿ ಆಚರಿಸಲು ಹಲವು ಕಾರಣಗಳಿವೆ. ನಾಗದೇವನು ಪರಶಿವನ ಕೊರಳ ಆಭರಣವಾಗಿದ್ದು ಈತನನ್ನು ಭಜಿಸಿದರೆ ಶಿವನನ್ನು ಸಂಪ್ರೀತಗೊಳಿಸಿದಂತೆ. ಶ್ರೀ ಹರಿಯ ಪ್ರಸನ್ನತೆಗಾಗಿ ಕೂಡ ಹಲವೆಡೆ ಶಾರೀರಿಕ ಸಮಸ್ಯೆಗಳ ಪರಿಹಾರಕ್ಕಾಗಿ ಅಂದರೆ ಚರ್ಮರೋಗ, ಸರ್ಪದೋಷ ನಿವಾರಣೆಗಾಗಿ, ಮದುವೆ, ಮಕ್ಕಳ ಶ್ರೇಯೋಭಿವೃದ್ಧಿಗಾಗಿ, ಸಂತಾನಹೀನತೆಗೆ ಕಾರಣವಾಗೋ ದೋಷ ಪರಿಹಾರಕ್ಕಾಗಿ ನಾಗಾರಾಧನೆಯೆ ಪರಿಹಾರ ಎಂಬ ನಂಬಿಕೆ ಇದೆ. ಆದ್ದರಿಂದ ಕರ್ನಾಟಕದ ಸುಪ್ರಸಿದ್ಧ "ಕುಕ್ಕೆ ಸುಬ್ರಮಣ್ಯ" ದೇಗುಲಕ್ಕೆ ಇಂದಿಗೂ ಬಹಳಷ್ಟು ಜನ ನಡೆದುಕೊಳ್ಳುವರು.

ಪಂಚಮಿಯನ್ನು ಈ ತಿಂಗಳಲ್ಲೇ ಆಚರಿಸುವ ನೈಸರ್ಗಿಕ ಕಾರಣವೆಂದರೆ ಮಳೆಗಾಲದಲ್ಲಿ 'ಬಿಲಗಳಲ್ಲಿ ನೀರು ತುಂಬಿ ಹಾವುಗಳು ಹೊರಬಂದು ಜನರಿಗೆ ತೊಂದರೆಕೊಡಬಾರದೆಂಬುದಾಗಿ ಪೂಜಿಸಲ್ಪಡುತ್ತದೆ.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರವಾದ್ದರಿಂದ ಹಬ್ಬಗಳ ಆಚರಣೆ ರಾಜ್ಯದಿಂದ ರಾಜ್ಯಕ್ಕೆ ಬದಲಾದರೂ ಭಕ್ತಿಯಲ್ಲಿ ಏಕತೆಯನ್ನು ಕಾಣಬಹುದು. ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಕಾಡಿನಿಂದ ಜೀವಂತ ನಾಗರಗಳನ್ನು ತಂದು ಪೂಜಿಸುವರು. ಕೆಲವೆಡೆ ಹಾವಿನ ಪ್ರತಿರೂಪ ಮಾಡಿಕೊಂಡು ಮನೆ ಮನೆಗೆ ಬಿಕ್ಷೆ ಬೇಡುವ ವಾಡಿಕೆ ಇದೆ. ಕರ್ನಾಟಕದ ದಕ್ಷಿಣ ಭಾಗದಲ್ಲಿ ಚಂದನ, ಅರಿಶಿಣದಿಂದ ಮಣೆ ಮೇಲೆ ನವ ನಾಗಗಳ ಆಕೃತಿ ಬರೆದು ಪೂಜಿಸೋ ಪದ್ಧತಿ ಇದೆ. ಇಲ್ಲವೆಂದರೆ ನಾಗರಕಲ್ಲು ಹಾಗೂ ಹುತ್ತಕ್ಕೆ ಶುಚಿಭೂತಕರಾಗಿ ಕುಟುಂಬ ಸಮೇತ ತೆರಳಿ ಅರಳು, ಹಾಲುಧೂರ್ವೆಯಿಂದ ಪೂಜಿಸುವರು. ಉತ್ತರ ಕರ್ನಾಟಕದಲ್ಲಿ 2 ದಿನಗಳ ಆಚರಣೆಯಾಗಿ ಮೃತ್ತಿಕೆಯ ನಾಗ ಹಾಗೂ ದೇವಸ್ಥಾನಗಳ ನಾಗ ಮೂರ್ತಿಗಳಿಗೆ ಹಾಲೆರೆಯುವುದುಂಟು.

ಈ ಹಬ್ಬದಲ್ಲಿ ಕರಿದ ಖಾದ್ಯಗಳಿಗೆ ನಿಷಿದ್ಧವಾಗಿದ್ದು ಸಾತ್ವಿಕ ಆಹಾರವೇ ಪ್ರಧಾನವಾಗಿರುತ್ತದೆ. ಆದ್ದರಿಂದ ನೇವೇದ್ಯ ಭೋಜನಗಳಿಗೆ ಅಕ್ಕಿಹಿಟ್ಟಿನ ಉಂಡೆಗಳು, ಚಿಗಳಿ, ಉಂಡೆಗಳನ್ನು ತಯಾರಿಸಿ ಸವಿಯುವುದುಂಟು. ಅಕ್ಕತಂಗಿಯರು ತವರಿನಿಂದ ಉಡುಗೊರೆ ಕೊಂಡೊಯ್ಯುವುದು ಸಹಜ. ಆದರೆ ವಿಶೇಷವಾಗಿ ಈ ಹಬ್ಬದಲ್ಲಿ ತವರಿನ ಸಹೋದರರಿಗೆ ಉಡುಗೊರೆಯನ್ನು ನೀಡುವುದರೊಂದಿಗೆ ತವರಿನಿಂದ ಅರಿಷಿಣ ಕುಂಕುಮದೊಂದಿಗೆ ವಿವಿಧ ಉಡುಗೊರೆಗಳನ್ನು ಗಂಡನ ಮನೆಗೆ ಕೊಂಡೊಯ್ಯುವುದು ಸಂಪ್ರದಾಯ. ಪಂಚಮಿ ಹಬ್ಬ ಜೋಕಾಲಿ ಹಬ್ಬವೆಂದೇ ಖ್ಯಾತಿ ಪಡೆದಿದ್ದು ಪ್ರತಿ ಮನೆ ಮನೆಗಳಲ್ಲಿ ಊರಿನ ಚಾವಡಿಯ ಹತ್ತಿರವಿರುವ ದೊಡ್ಡಮರಗಳಿಗೆ ಬಳ್ಳಿಯಿಂದಲೇ ಜೋಕಾಲಿ ಕಟ್ಟಿ ಹಿರಿಯ, ಕಿರಿಯರೆಂಬ ಭೇದವಿಲ್ಲದೇ ಪಂಥಗಳನ್ನು ಕಟ್ಟಿ ಜೋಕಾಲಿ ಆಡುವುದನ್ನು ನೋಡಲು ಚಂದ.

ಹೊಸ ಬಟ್ಟೆ ಧರಿಸಿ ಮನೆಯ, ಓಣಿಯ ಎಲ್ಲ ಮಕ್ಕಳು, ಹಿರಿಯರು ಒಟ್ಟಾಗಿ ಸಂಭ್ರಮ ಪಡೋ ಈ ಹಬ್ಬ ಜಡಿಮಳೆಯಂತೆ ಜಡಹಿಡಿದ ಜೀವನದಲ್ಲಿ ನವಚೈತನ್ಯದ ಚಿಗುರು ಮೊಳಕೆಯೊಡೆವಂತೆ ಮಾಡಿ, ಬದುಕಿನ ಹೊಸ ಋತುಮಾನಕ್ಕೆ ಹೊಸಹುಮ್ಮಸ್ಸಿನೊಂದಿಗೆ ಬಾಂಧವ್ಯ ಬೆಸುಗೆ ಗಟ್ಟಿಗೊಳಿಸುತ್ತಾ ಸಾಗುವುದೇ ಈ ಹಿಂದೂ ಹಬ್ಬಗಳ ವೈಶಿಷ್ಟ್ಯ. •

# ಮಂಡ್ಯದಲ್ಲಿ ಗುರುವಂದನಾ

ಕೆ.ಆರ್. ಪೇಟೆಯಲ್ಲಿ ಈಶ್ವರ ದೇಗುಲದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ತಾಲ್ಲೂಕು ಘಟಕವು ಗುರುಪೂರ್ಣಿಮೆ ಕಾರ್ಯಕ್ರಮವನ್ನು ವಿಜ್ರುಂಭಣೆಯಿಂದ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಪ್ರಯುಕ್ತ ಶ್ರೀ ಗೋಪಾಲಕೃಷ್ಣ ಅವಧಾನಿಯವರ ನೇತೃತ್ವ ವಹಿಸಿದ್ದರು. ಕನ್ನಡ ಉಪನ್ಯಾಸಕ ಚಾ.ಶಿ ಜಯಕುಮಾರ್ ಉಪನ್ಯಾಸ ನೀಡಿದರು. ಶಿಕ್ಷಕ ಸಂಘದ ಮಂಡ್ಯ ಜಿಲ್ಲಾ ಅಧ್ಯಕ್ಷ ಕೆ. ಕಾಳೇಗೌಡ, ಕಾಯದರ್ಶಿ ರಾಜು ಪಾಲ್ಗೊಂಡಿದ್ದರು.

**ಕಷ್ಟ – ನಷ್ಟದ ಹಾದಿಗಳು ಸದಾ ನಮ್ಮನ್ನು ಸುಂದರ ಭವಿಷ್ಯಕ್ಕೆ ಕರೆದೊಯ್ಯುತ್ತದೆ.**

# ಬೆಂಗಳೂರು ಉತ್ತರ ಜಿಲ್ಲೆ ಪ್ರತಿಭಾ ಪುರಸ್ಕಾರ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲಾ ಘಟಕವು ದಿನಾಂಕ 12.8.2018 ರಂದು ಮಲ್ಲೇಶ್ವರಂನ, ಹಿಮಾಂಶು ಜ್ಯೋತಿ ಕಲಾಪೀಠಶಾಲೆಯಲ್ಲಿ 33ನೇ ಪ್ರತಿಭಾ ಪುರಸ್ಕಾರ ಸಮಾರಂಭವು ಜರುಗಿತು.

ಸಮಾರಂಭ ಪ್ರಾರಂಭವಾಗುವ ಮೊದಲು ವಿಧಾನ ಪರಿಷತ್ ಸದಸ್ಯರಾದ ಶ್ರೀ ಅ ದೇವೇಗೌಡರು ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲರು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು. ಪ್ರತಿಭಾ ಪುರಸ್ಕಾರ ಸಮಾರಂಭವು ಶ್ರೀಮತಿ ಸಾವಿತ್ರಿ ಗುಣಿ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.

ಜಿಲ್ಲಾ ಕಾರ್ಯದರ್ಶಿ ಶ್ರೀ ಎಸ್. ಜಿ. ತಾಂಬೆಯವರು ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಗಣ್ಯರೆಲ್ಲರೂ ದೀಪವನ್ನು ಪ್ರಜ್ವಲಿಸಿದರು. ಗೌರವ ಅಧ್ಯಕ್ಷರಾದ ಶ್ರೀ ಜೆ.ಎಂ ಜೋಶಿಯವರು ಪ್ರಸ್ತಾವಿಕ ನುಡಿಗಳನ್ನು ಹೇಳಿದರು. ಪ್ರಥಮಿಗರಲ್ಲಿ ಪ್ರಥಮಿಗಳಾದ 10 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ನಂತರ ಶೇ 85 ಕ್ಕಿಂತ ಅಧಿಕ ಅಂಕಗಳನ್ನು ಗಳಿಸಿದ ಶಾಲಾ ಶಿಕ್ಷಕರ ಮಕ್ಕಳು ಮತ್ತು ಅವರ ಪೋಷಕರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾದ ಶ್ರೀ ಅ ದೇವೇಗೌಡರು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನು ಹೇಳಿದರು. ಕಾಲೇಜು ಮುಗಿಯುವರೆಗೆ ಮೊಬೈಲ್ ಬಳಸಬೇಡಿ ಗುರುಹಿರಿಯಿಗೆ ಗೌರವಿಸಿ ವಿದ್ಯಾಭ್ಯಾಸ ಮುಗಿಸಿ ವಿದೇಶಕ್ಕೆ ಹಾರಿ ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸಬೇಡಿ ಎಂದರು.

ಮತ್ತೋರ್ವ ಅತಿಥಿಗಳಾದ ಯೋಗ ಗುರು ಶ್ರೀ ಉಮಾಮಹೇಶ್ವರ ಅವರು ಮಾತನಾಡಿ ಶಿಸ್ತು, ವಿನಯ, ಆರೋಗ್ಯ ಇದ್ದರೆ ನೀವು ಏನನ್ನಾದರೂ ಸಾಧಿಸಬಹುದು. ಸಮವಸ್ತ್ರ ಇರುವುದೇ ಶಿಸ್ತನ್ನು ರೂಡಿಸಿಕೊಳ್ಳಲು ಸಮವಸ್ತ್ರ ಇಲ್ಲ ಅಂದರೆ ಶಿಸ್ತು ಇರುವುದಿಲ್ಲ. ಜೊತೆಗೆ ದಿನವೂ ಕನಿಷ್ಠ 30 ನಿಮಿಷವಾದರೂ ಯೋಗಾಸನ ಮಾಡಿ ಎಂದು ಹೇಳಿ ಎಲ್ಲರಿಗೂ ಒಂದು ಆಸನ ಮಾಡಿಸಿದರು. ಉಳಿದ ಶಾಲಾ ಪ್ರಥಮಿಗರನ್ನು ಒಬ್ಬೊಬ್ಬರನ್ನು ಕರೆದು ಪುರಸ್ಕರಿಸಲಾಯಿತು.

ಉತ್ತರ ಜಿಲ್ಲೆಯ ವಲಯ 3 ರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಪ್ರತಿಭಾ ಅಲೆಕ್ಸಾಂಡರ್ ಮಾತನಾಡಿ ನೀವೆಲ್ಲಾ ಈಗಲೇ ಗುರಿ ಇಟ್ಟುಕೊಳ್ಳಿ ಆ ಗುರಿ ತಲುಪಲು ನಿತ್ಯ ಪ್ರಯತ್ನಿಸಬೇಕು. ನಾನು ಶಿಕ್ಷಣ ಅಧಿಕಾರಿಯಾಗಬೇಕೆಂದು ಎಸ್.ಎಸ್.ಎಲ್.ಸಿ ಇರುವಾಗಲೇ ನಿರ್ಧರಿಸಿದ್ದೆ ಅದನ್ನು ತಲುಪಲು ಶ್ರಮ ವಹಿಸಿದೆ. ನಾನೊಬ್ಬ ಬಸ್ ಕಂಡಕ್ಟರ್ ಮಗಳು. ಈಗ ಅಧಿಕಾರಿಯಾಗಿದ್ದೇನೆ. ಕೆಲವು ನೈಜ ಘಟನೆಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಯಶಸ್ಸು ಗಳಿಸಲು ಯಾವುದೇ ಶಾರ್ಟ್‌ಕಟ್ ಇಲ್ಲ ಎಂಬುದನ್ನು ತಿಳಿಯಿರಿ ಎಂದರು.

ಹಿಮಾಂಶು ಜ್ಯೋತಿ ಕಲಾ ಪೀಠ ಸಂಸ್ಥೆಯ ಅಧ್ಯಕ್ಷರಾದ ಡಾ॥ ಬಿ ವಿ ಎ ರಾವ್ ಮಾತನಾಡಿ ಈಗಿನ ಶಿಕ್ಷಣದಲ್ಲಿ ಮೌಲ್ಯಗಳೇ ಇಲ್ಲ. ಎಲ್ಲರೂ ಅಂಕಗಳ ಹಿಂದೆ ಓಡುತ್ತಿದ್ದಾರೆ. ಹಿರಿಯರಿಗೆ ಗೌರವಿಸುವುದಿಲ್ಲ. ನೀವೆಲ್ಲಾ ಉತ್ತಮ ಪ್ರತಿಭೆಗಳು ಶಿಕ್ಷಣದ ಜೊತೆಗೆ ಮೌಲ್ಯಗಳನ್ನು ಗಳಿಸಿಕೊಳ್ಳಿ ನಿಮಗೆ ಇಷ್ಟವಾದ ಶಿಕ್ಷಣವನ್ನು ಪಡೆಯಬೇಕು. ಹಾಗೆಯೇ ಪಾಲಕರೂ ಕೂಡ ಮಕ್ಕಳಿಗೆ ಇದೇ ಕೋರ್ಸ್ ಮಾಡಿ ಎಂದು ಒತ್ತಾಯಿಸಬಾರದು ಎಂದರು. ಸ್ಕಿಲ್ ಬೇಸ್ಡ್ ಎಜ್ಯುಕೇಶನ್ ತುಂಬಾ ಅವಶ್ಯವಿದೆ. ಅನೇಕ ವಿದೇಶ ಕಂಪನಿಗಳಲ್ಲಿ ಅಂಕಗಳ ಆಧಾರವಾಗಿ ಕೆಲಸ ಕೊಡುವುದಿಲ್ಲ. ಅವರ ಕೌಶಲ್ಯ ನೋಡಿ ಕೊಡುತ್ತಾರೆಂದು ತಿಳಿಸಿದರು.

ಮತ್ತೋರ್ವ ಅತಿಥಿಗಳಾದ ಡಾ॥ ಸಿ.ಎನ್ ಅಶ್ವತ್ ನಾರಾಯಣ ಶಾಸಕರು, ಮಲ್ಲೇಶ್ವರಂ ಇವರು ಮಾತನಾಡಿ, ವಿದ್ಯಾರ್ಥಿಗಳಿಗೆ ಸರಕಾರದ ಸವಲತ್ತುಗಳ ಬಗ್ಗೆ ತಿಳಿಸಿದರು. ನೀವು ಇಷ್ಟಪಟ್ಟ ಕೋರ್ಸ್‌ನ್ನೇ ತೆಗೆದುಕೊಂಡು ಉತ್ತಮ ಸಾಧನೆ ಮಾಡಿ ನಿಮ್ಮ ಪ್ರತಿಭೆ ಮುಂದೆಯೂ ಹೀಗೆಯೇ ಇರಬೇಕೆಂದು ತಿಳಿಸಿದರು. ಎಲ್ಲ ಶಾಲಾ ಪ್ರಥಮಿಗರಿಗೆ ಶ್ರೀಮತಿ ವಾಸುಕಿ ಕಾರ್ಯದರ್ಶಿಗಳು ಬೆಂಗಳೂರು ದಕ್ಷಿಣ ಜಿಲ್ಲೆ ಇವರು ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಶ್ರೀ ಚಿದಾನಂದ ಪಾಟೀಲರು ಅಧ್ಯಕ್ಷೀಯ ನುಡಿಗಳನ್ನು ಹೇಳಿದರು. ಶ್ರೀ ನಾರಾಯಣ ಭಟ್ಟ ಅವರು ದಾನಿಗಳಿಗೆ ಕೃತಜ್ಞತೆಗಳನ್ನು ತಿಳಿಸಿದರು. ಕುಮಾರಿ ಸ್ನೇಹಾ ಮಲ್ಲಿಕಾರ್ಜುನ ಕೊಡಗಿ ಪುರಸ್ಕೃತರ ಪರವಾಗಿ ಅನಿಸಿಕೆ ಹೇಳಿದಳು. ಕಾರ್ಯದರ್ಶಿ ಶ್ರೀ ಗಂಗಪ್ಪನವರು ವಂದನಾರ್ಪಣೆ ಮಾಡಿದರು. ಶ್ರೀ ಗಂಗಾಧರ ನಿರೂಪಣೆ ಮಾಡಿದರು. ಶ್ರೀ ಹರಿದಾಸ್ ಶ್ರೀ ಜನಾರ್ಧನ್ ಶ್ರೀ ಕುಮಾರ್, ಶ್ರೀಮತಿ ದಾಕ್ಷಾಯಿಣಿ, ಶ್ರೀ ಮಲ್ಲಿಕಾರ್ಜುನ ಕೊಡಗಿ, ಶ್ರೀ ಪ್ರಸನ್ನ ಕುಮಾರ ಅವರುಗಳು ಶಾಲಾ ಪ್ರಥಮಿಗರ ಪಟ್ಟಿಯನ್ನು ಓದಿದರು. ಕಾರ್ಯಕ್ರಮವು ಶ್ರೀಮತಿ ಜ್ಯೋತಿ ಮಹೇಶ್ವರವರ ವಂದೇಮಾತರಂದೊಂದಿಗೆ ಮುಕ್ತಾಯವಾಯಿತು. ವಿವಿಧ ಶಾಲೆಗಳಿಂದ ಸುಮಾರು 200 ಶಾಲಾ ಪ್ರಥಮಿಗರು ಹಾಗೂ 40 ಶಿಕ್ಷಕರು ಮತ್ತು ಪಾಲಕರು ಭಾಗವಹಿಸಿದ್ದರು. ●

---

**ಮನಸ್ಸು ಏಕಾಗ್ರವಾಗದಿದ್ದರೂ ಪವಿತ್ರ ನಾಮ ಜಪವನ್ನು ಮಾತ್ರ ಬಿಡಬೇಡ. ನಿನ್ನ ಕರ್ತವ್ಯವನ್ನು ನೀನು ಮಾಡು. ನಾಮ ಜಪ ಮಾಡುವಾಗ ಮನಸ್ಸು ಗಾಳಿಯಿಲ್ಲದ ಪ್ರದೇಶದಲ್ಲಿಟ್ಟ ದೀಪದಂತೆ ಅಲುಗಾಡದೆ ಸ್ಥಿರವಾಗಿರುವುದು. ದೀಪ ಅಲುಗಾಡುವಂತೆ ಮಾಡುವುದು ಗಾಳಿ. ಅದೇ ರೀತಿ ನಮ್ಮ ಬಯಕೆ, ವಾಸನೆಗಳು ಮನಸ್ಸನ್ನು ಚಂಚಲಗೊಳಿಸುವುವು.**

**– ಶ್ರೀಮಾತೆ ಶಾರದಾದೇವಿ**

➢ ಪುಟ 4 ರಿಂದ.....

ಸೇವೆಯಲ್ಲಿ ಈ ತಾಯಂದಿರು ತೋರಿದ ಧೈರ್ಯ, ಸ್ಥೈರ್ಯ, ಕ್ಷಮತೆ ಅವರ ಸಾಮರ್ಥ್ಯದ ಕುರುಹುಗಳೇ ಆಗಿವೆ.

ಪ್ರಸ್ತುತ ಸ್ವತಂತ್ರ ಭಾರತದ ಚಿತ್ರವನ್ನು ನೋಡುವಾಗ ಕಳೆದ ಏಳು ದಶಕಗಳಲ್ಲಿ ಪ್ರಗತಿಯ ಅನೇಕ ಮೈಲುಗಲ್ಲುಗಳನ್ನು ಗಮನಿಸ ಬಹುದಾಗಿದೆ. ಮಹಿಳೆಯರ ಸಾಮರ್ಥ್ಯದ ವಿವಿಧ ಆಯಾಮಗಳು ಕಂಡು ಬರುತ್ತಿವೆ. ಸಾಹಿತ್ಯ, ಕಲೆ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ ಎಂಬ ಹತ್ತಾರು ಕ್ಷೇತ್ರಗಳಲ್ಲಿ ಆತ್ಮವಿಶ್ವಾಸದೊಂದಿಗೆ ಹಲವಾರು ಸಾಧನೆಗಳನ್ನು ಮಾಡುತ್ತ ಮುನ್ನಡೆಯುತ್ತಿರುವ ಮಹಿಳೆಯರನ್ನು ಎಲ್ಲ ಕಡೆ ನೋಡುತ್ತಿದ್ದೇವೆ. ಮನೋದಾರ್ಢ್ಯ ದೊಂದಿಗೆ ದೈಹಿಕದಾರ್ಢ್ಯದ ಅಗತ್ಯವೂ ಇರುವ, ಮಹಿಳೆಯರಿಗೆ ಅಸಾಧ್ಯವೆನಿಸುವ ಸೇವಾಕ್ಷೇಂದ್ರಗಳಲ್ಲಿ (ಭೌಗೋಳಿಕವಾಗಿ ಹವಮಾನ ವೈಪರೀತ್ಯದ ಕಾರಣದಿಂದ ಅತ್ಯಂತ ಕಷ್ಟಸಾಧ್ಯವಾದ ಪ್ರದೇಶಗಳಲ್ಲಿನ ಸೇನಾಕೇಂದ್ರಗಳೂ ಸೇರಿದಂತೆ) ಕೂಡ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ಹೆಣ್ಣುಮಕ್ಕಳ ಆತ್ಮಸ್ಥೈರ್ಯ, ಆತ್ಮವಿಶ್ವಾಸ ಅಚ್ಚರಿ ಮೂಡಿಸುತ್ತದೆ. 'ಸ್ವಾತಂತ್ರ್ಯ' ಎಂಬುದು ವ್ಯಕ್ತಿಯಲ್ಲಿ ಆರೋಗ್ಯಕರವೂ, ಸರ್ವತೋಮುಖವೂ, ಸಮಾಜಮುಖಿಯೂ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಕಾರಿಯೆಂಬ ಅಂಶವನ್ನು ತಿಳಿದವರು ಮಾತ್ರ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವೆಂಬುದನ್ನು ಈ ಮೇಲೆ ಪ್ರಸ್ತಾಪಿಸಿದ ಹೆಣ್ಣು ಮಕ್ಕಳೆಲ್ಲರೂ ತಿಳಿದಿದ್ದರು. ಅದರಿಂದಲೇ ಅವರೆಲ್ಲರ ಸಾಧನೆಗಳು ಫಲಕಾರಿಯಾದುವು. ಆದರೆ, ಇತ್ತೀಚಿನ ವರ್ಷಗಳಲ್ಲಿ ವಿದೇಶೀ ಸಂಸ್ಕೃತಿಯ ಆಕರ್ಷಣೆಗೆ ಮರಳಾಗಿ ಸ್ವಚ್ಛಂದತೆಯನ್ನೇ ಸ್ವಾತಂತ್ರ್ಯವೆಂದು ಭ್ರಮಿಸಿ ಮನಬಂದಂತೆ ನಡೆಯುವ ಹೆಣ್ಣುಮಕ್ಕಳನ್ನೂ ನೋಡುತ್ತಿದ್ದೇವೆ. ಅದು ವೇಷ ಭೂಷಣ ಗಳಲ್ಲಿರಬಹುದು, ಆಚಾರ, ವ್ಯವಹಾರಗಳಲ್ಲಿಬಹುದು. ಆಧುನಿಕತೆ ಯೆಂದು ತಪ್ಪು ಗ್ರಹಿಕೆಯಿಂದ ಆಲೋಚಿಸುವ ರೀತಿಯಿರಬಹುದು. ಒಟ್ಟಾರೆಯಾಗಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ರೀತಿಯಲ್ಲಿರಬಹುದು. ನಿಜವಾದ ಸ್ವಾತಂತ್ರ್ಯವೆಂದರೇನೆಂದು ತಿಳಿಯದೇ ಇರುವ ಕಾರಣದಿಂದಾಗಿಯೇ ಈ ಎಲ್ಲ ಅನರ್ಥಗಳೂ ಸಂಭವಿಸುತ್ತಿವೆ.

ಭಾರತೀಯ ಸಂಸ್ಕೃತಿಯು ಅತ್ಯಂತ ಶ್ರೀಮಂತವಾದುದು, ಮೌಲಿಕವಾದುದು. ಅದರಿಂದಲೇ ಅದಕ್ಕೆ 'ವಿಶ್ವಗುರು' ಎಂಬ ಪಟ್ಟ. ಇಂತಹ ಭದ್ರ ಪರಂಪರೆಯನ್ನು ಹೊಂದಿದ ಭಾರತೀಯ ಸ್ತ್ರೀ ತನ್ನ ವೈಶಿಷ್ಟ್ಯದೊಂದಿಗೆ ತನ್ನತನವನ್ನು ಕಾಯ್ದುಕೊಂಡೇ ದೇಶದ ಹೆಮ್ಮೆಯ ಪ್ರಜೆಯೆನಿಸಿಕೊಂಡೇ ಬಂದಿದ್ದಾಳೆ. ಇವೆಲ್ಲ ಹಿನ್ನೆಲೆಯನ್ನು ಗಮನಿಸುತ್ತ ಇಂದಿನ ಭಾರತೀಯ ಮಹಿಳೆಯರೆಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತುಕೊಂಡು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ತಮ್ಮ ಕಾರ್ಯಕ್ಷಮತೆಯನ್ನು, ದಕ್ಷತೆಯನ್ನು ತೋರಿದಾಗಲೇ ಅವರ ಸಾಮರ್ಥ್ಯದ ಸದುಪಯೋಗವಾಗಲು ಸಾಧ್ಯ. ಸ್ತ್ರೀ ಶಕ್ತಿಯ ಹಿರಿಮೆಯು ಎಂದೂ ಸಾರ್ವಕಾಲಿಕವೇ ಎಂಬುದು ಆಗ ನಿರೂಪಿತವಾಗುತ್ತದೆ. ●

**ಒಮ್ಮೆ ಅವನ ಪವಿತ್ರನಾಮದ ಶಕ್ತಿಯಲ್ಲಿ ನಂಬಿಕೆ ಹುಟ್ಟಿ ಅದನ್ನು ಪದೇ ಪದೇ ಉಚ್ಚರಿಸುವುದಕ್ಕೆ ಮನಸ್ಸಾದ ಮೇಲೆ ಭಕ್ತಿ, ವಿವೇಕ, ಸಾಧನೆಗಳಾವುವೂ ಅವಶ್ಯಕವಿಲ್ಲ. ಸಂಶಯ ಮಾಯವಾಗುವುದು. ಅವನ ನಾಮದ ಬಲದಿಂದ ದೇವರನ್ನೇ ಹೊಂದುವನು.**

**– ಶ್ರೀರಾಮಕೃಷ್ಣರು**

# ಕಲ್ಬುರ್ಗಿಯಲ್ಲಿ ಗುರುವಂದನಾ

## ಸಂಸ್ಕಾರಯುತ ಶಿಕ್ಷಣದ ವೃತ್ತಿ ರಾಷ್ಟ್ರೀಯ ಭಾವ ಮೂಡಿಸಲು ಶಿಕ್ಷಕರಿಗೆ ಸಲಹೆ

ನಾವು ಪಡೆಯುವ ಶಿಕ್ಷಣ ಕೇವಲ ಮಾಹಿತಿಯನ್ನು ಮಾತ್ರ ಒದಗಿಸುತ್ತಿದ್ದು, ನಮ್ಮಲ್ಲಿ ಶ್ರದ್ಧೆ, ಆತ್ಮವಿಶ್ವಾಸ, ಉತ್ಸಾಹ ಹಾಗೂ ಘನತೆ ಹೆಚ್ಚಿಸಲು ಕಾರಣವಾಗಬೇಕು. ಶಿಕ್ಷಕರಾದವರು ವೃತ್ತಿ ನೈಪುಣ್ಯತೆ ಜೊತೆ ಸಂಸ್ಕಾರಯುತ ರಾಷ್ಟ್ರೀಯ ಮನೋಭಾವ ಬೆಳೆಸಿಕೊಳ್ಳಿಸಿಕೊಳ್ಳುವಂತಹ ಶಿಕ್ಷಣ ನೀಡುವಂತಾಗಬೇಕು ಎಂದು ನೂತನ ವಿದ್ಯಾಲಯ ಪದವಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ. ಸುರೇಶ ಹೇರೂರ ಸಲಹೆ ನೀಡಿದರು.

ನಗರದ ನಳಂದ ಪದವಿಪೂರ್ವ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಕಲಬುರಗಿ ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಂಡಿರುವ ಗುರುವಂದನಾ ಹಾಗೂ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮುಖ್ಯಭಾಷಣಕಾರರಾಗಿ ಮಾತನಾಡಿದರು.

ಮಾಧ್ಯಮಿಕ ಶಿಕ್ಷಕ ಸಂಘವು ಶಿಕ್ಷಕರಲ್ಲಿ ವೃತ್ತಿ ನಿಷ್ಠೆ ಹಾಗೂ ಘನತೆಗಳನ್ನು ಜಾಗೃತಗೊಳಿಸಿ ಅವರಲ್ಲಿ ಕರ್ತವ್ಯ ಪ್ರಜ್ಞೆ ಹೆಚ್ಚಿನ ಜ್ಞಾನ ಗಳಿಸುವ ಹಂಬಲ ಮಕ್ಕಳ ಬಗ್ಗೆ ಆತ್ಮೀಯತೆ ಭಾವನೆಯನ್ನು ಮೂಡಿಸಲು ಸತತವಾಗಿ ಪ್ರಯತ್ನಿಸುತ್ತಿದೆ. ಶಿಕ್ಷಕರನ್ನು ಸರಿಪಡಿಸಿದರೆ ಸಮಾಜವು ತಾನೇ ಸರಿಯಾಗುತ್ತದೆ ವೈಯಕ್ತಿಕ ಹಿತದೊಂದಿಗೆ ರಾಷ್ಟ್ರಹಿತವು ಸುರಕ್ಷಿತವಾಗುತ್ತದೆ.

ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ ಪಾಟೀಲ ಯಳಸಂಗಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಮಾಧ್ಯಮಿಕ ಶಿಕ್ಷಕ ಸಂಘವು ಶಿಕ್ಷಕರ ಹಾಗೂ ಶಿಕ್ಷಣ ಕೇತ್ರದ ಬೇಡಿಕೆಗಳಿಗಷ್ಟೆ ಹೋರಾಟ ಮಾಡದೆ ಸಮಾಜದಲ್ಲಿ ಶಿಕ್ಷಕರಿಗೆ ಗೌರವ ಸಮ್ಮಾನ ಸಿಗುವಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಸತತ ಪ್ರಯತ್ನಶೀಲವಾಗಿದೆ. ಗುರುಗಳ ತ್ಯಾಗಮಯ ಜೀವನ ಅನುಕರಣಿಯ ಆಚಾರ ವಿಚಾರಗಳಿಂದ ಸಮಾಜದಲ್ಲಿ ಶ್ರೇಷ್ಠ ಣಾಗರೀಕರ ನಿರ್ಮಾಣ ವಾಗಿದೆ. ಈ ಕಾರಣದಿಂದಲೇ ಪುರಾತನ ಪರಂಪರೆಯನ್ನಯ ಸ್ಮರಿಸುತ್ತ ಮಹರ್ಷಿ ವೇದವ್ಯಾಸರ ಪ್ರೇರಣಾದಾಯಕ ಜೀವನವನ್ನು ಗಮನಿಸಿ ವರ್ತಮಾನದಲ್ಲಿ ಭಾರತೀಯ ಪರಂಪರೆಯನ್ನು ನಿರ್ಮಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳಲಾಗಿದೆ.

ಶಿಕ್ಷಕರಿಗಾಗಿ ಶಿಕ್ಷರಿಂದಲೇ ನಡೆಸಲ್ಪಡುವ ಶಿಕ್ಷಕ ಸಮಾಚಾರ ಪತ್ರಿಕ ಹಾಗೂ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯತ್ವಕ್ಕೆ ವಿಭಾಗ ಪ್ರಮುಖ ಮಹೇಶ ಬಸರಕೋಡ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಶಿವಲಿಂಗಪ್ಪ ಮೂಲಗೆ, ಎಸ್ ಬಿ ಸ್ವಾಮಿ, ಕೆ. ಬಸವರಾಜ, ಚಂದ್ರಶೇಖರ ಗೋಸಾಲ, ಕೆ. ಬಸವರಾಜ, ಮಡಿವಾಳಪ್ಪ ಬಿರಾದಾರ, ಮಹೇಶ, ಪ್ರಭುಲಿಂಗ ಮುಲಗೆ ಮುಂತಾದವರು ಹಾಜರಿದ್ದರು ಶಿಕ್ಷಕ ಶಿವಶರಣ ರುದನೂರ ಸ್ವಾಗತಿಸಿದರು. ವಿಭಾಗ ಪ್ರಮುಖ ಮಹೇಶ ದೇವಣಿ ವಂದಿಸಿದರು. ಸಂಜೀವಕುಮಾರ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ●

# ಮೈಸೂರಿನಲ್ಲಿ ಗುರುವಂದನಾ ಮತ್ತು ಪ್ರತಿಭಾ ಪುರಸ್ಕಾರ

ಭಾರತೀಯ ಪರಂಪರೆಯಲ್ಲಿ ಗುರುಗಳಿಗೆ ಪೂಜ್ಯ ಸ್ಥಾನವಿದ್ದು ಆದರೆ ಇತ್ತೀಚಿನ ದಿನಗಳಲ್ಲಿ ಅದು ಕಡಿಮೆಯಾಗುತ್ತಿದೆ ಎಂದು ಶಾಸಕ ಎಸ್.ಎ ರಾಮದಾಸ್ ವಿಷಾದಿಸಿದರು.

ಗೋಪಾಲಸ್ವಾಮಿ ವಿದ್ಯಾಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮತ್ತು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶೈಕ್ಷಿಕ್ ಸಂಘವು ಆಯೋಜಿಸಿದ್ದ ಗುರುವಂದನಾ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಯಿಯ ನಂತರದ ಸ್ಥಾನದಲ್ಲಿ ಗುರು ಎಂಬುದನ್ನು ವಿದ್ಯಾರ್ಥಿಗಳು ಅರಿತು, ಅವರ ಗೌರವಕ್ಕೆ ಧಕ್ಕೆ ಎಂಬುದನ್ನು ವಿದ್ಯಾರ್ಥಿಗಳು ಅರಿತು, ಅವರ ಗೌರವಕ್ಕೆ ದಕ್ಕೆ ತಾರದ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಾಧ್ಯಾಪಕಿ ಡಾ॥ ಜ್ಯೋತಿ ಶಂಕರ್ ಮಾತನಾಡಿ, ಭಾರತೀಯ ಸಮಾಜದಲ್ಲಿ ಇರುವ ಗುರು ಶಿಷ್ಯರ ಪರಂಪರೆ ಬೇರೆಲ್ಲೂ ಇಲ್ಲ. ಈ ಪರಂಪರೆಯನ್ನು ಮರೆತರೆ ನಮ್ಮ ಸಮಾಜದ ಗೌರವ ಕಡಿಮೆಯಾಗುತ್ತದೆ. ಒಬ್ಬ ವಿದ್ಯಾರ್ಥಿಯನ್ನು ಜನ ಮೆಚ್ಚುವ ಉತ್ತಮ ವ್ಯಕ್ತಿಯಾಗಿ ಮಾಡುವಲ್ಲಿ ಗುರುವಿನ ಹೊಣೆ ಹೆಚ್ಚಿದೆ ಎಂದರು

ಇದೇ ವೇಳೆ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಸ್.ನಂದೀಶ್, ರಾಜ್ಯ ಮಹಾವಿದ್ಯಾಲಯದ ಶೈಕ್ಷಿಕ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ, ಜಿಲ್ಲಾಧ್ಯಕ್ಷ ಪ್ರೊ॥ ಕೆ ಆರ್.ವೀರಯ್ಯ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ ಸಿ ರಾಜಣ್ಣ ಉಪಸ್ಥಿತರಿದ್ದರು.

# ಮೈಸೂರಿನಲ್ಲಿ ಗುರುವಂದನಾ ಮತ್ತು ಪ್ರತಿಭಾ ಪುರಸ್ಕಾರ

ಭಾರತೀಯ ಪರಂಪರೆಯಲ್ಲಿ ಗುರುಗಳಿಗೆ ಪೂಜ್ಯ ಸ್ಥಾನವಿದ್ದು ಆದರೆ ಇತ್ತೀಚಿನ ದಿನಗಳಲ್ಲಿ ಅದು ಕಡಿಮೆಯಾಗುತ್ತಿದೆ ಎಂದು ಶಾಸಕ ಎಸ್.ಎ ರಾಮದಾಸ್ ವಿಷಾದಿಸಿದರು.

ಗೋಪಾಲಸ್ವಾಮಿ ವಿದ್ಯಾಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮತ್ತು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶೈಕ್ಷಿಕ್ ಸಂಘವು ಆಯೋಜಿಸಿದ್ದ ಗುರುವಂದನಾ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಾಯಿಯ ನಂತರದ ಸ್ಥಾನದಲ್ಲಿ ಗುರು ಎಂಬುದನ್ನು ವಿದ್ಯಾರ್ಥಿಗಳು ಅರಿತು, ಅವರ ಗೌರವಕ್ಕೆ ಧಕ್ಕೆ ಎಂಬುದನ್ನು ವಿದ್ಯಾರ್ಥಿಗಳು ಅರಿತು, ಅವರ ಗೌರವಕ್ಕೆ ದಕ್ಕೆ ತಾರದ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಾಧ್ಯಾಪಕಿ ಡಾ॥ ಜ್ಯೋತಿ ಶಂಕರ್ ಮಾತನಾಡಿ, ಭಾರತೀಯ ಸಮಾಜದಲ್ಲಿ ಇರುವ ಗುರು ಶಿಷ್ಯರ ಪರಂಪರೆ ಬೇರೆಲ್ಲೂ ಇಲ್ಲ. ಈ ಪರಂಪರೆಯನ್ನು ಮರೆತರೆ ನಮ್ಮ ಸಮಾಜದ ಗೌರವ ಕಡಿಮೆಯಾಗುತ್ತದೆ. ಒಬ್ಬ ವಿದ್ಯಾರ್ಥಿಯನ್ನು ಜನ ಮೆಚ್ಚುವ ಉತ್ತಮ ವ್ಯಕ್ತಿಯಾಗಿ ಮಾಡುವಲ್ಲಿ ಗುರುವಿನ ಹೊಣೆ ಹೆಚ್ಚಿದೆ ಎಂದರು

ಇದೇ ವೇಳೆ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಎಸ್.ನಂದೀಶ್, ರಾಜ್ಯ ಮಹಾವಿದ್ಯಾಲಯದ ಶೈಕ್ಷಿಕ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂಧನಕೇರಾ, ಜಿಲ್ಲಾಧ್ಯಕ್ಷ ಪ್ರೊ॥ ಕೆ ಆರ್.ವೀರಯ್ಯ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ ಸಿ ರಾಜಣ್ಣ ಉಪಸ್ಥಿತರಿದ್ದರು.

# ಹುಬ್ಬಳ್ಳಿಯಲ್ಲಿ ಸದಸ್ಯತ ಅಭಿಯಾನ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸದಸ್ಯತ್ವ ಅಭಿಯಾನವನ್ನು ಹುಬ್ಬಳ್ಳಿಯ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ಅವರು ಸ್ವತಃ ತಾವು ಸದಸ್ಯರಾಗುವುದರ ಮೂಲಕ ಚಾಲನೆ ನೀಡಿದರು. ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ ಬೂದಿಹಾಳ, ಧಾರವಾಡ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಬಸವರಾಜ ದೇವರಮನಿ ಹಾಗೂ ಕಾರ್ಯಕರ್ತ ಶಿಕ್ಷಕರು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

# ಬಾಗಲಕೋಟೆ : ಸದಸ್ಯತಾ ಅಭಿಯಾನ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬಾಗಲಕೋಟೆ ಸದಸ್ಯತ್ವ ಅಭಿಯಾನವನ್ನು ವಿಧಾನಪರಿಷತ್ ಸದಸ್ಯರಾದ ಶ್ರೀ ಹನುಮಂತ ನಿರಾಣಿ ಅವರು ಚಾಲನೆ ನೀಡಿದರು ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಆರ್ ಜಿ ಸನ್ನಿ ಮಹಾಮಂಡಳಿ ಜಿಲ್ಲಾಧ್ಯಕ್ಷ ದಯಾನಂದ ಶಿಕ್ಕೇರಿ ಪ್ರಧಾನ ಕಾರ್ಯದರ್ಶಿ ಅವಿನಾಶ್ ಹಿರೇಮಠ ಪ್ರಾಚಾರ್ಯ ಶ್ರೀ ಲೆಕ್ಕನ್ನವರ ಹಾಗೂ ತಾಲ್ಲೂಕು ಅಧ್ಯಕ್ಷರಾದ ಶ್ರೀ ಯಾಳವಾರಮಠ ಉಪಸ್ಥಿತರಿದ್ದರು.

**ಪಾಂಡವರ ಸಂದೇಶ ಹೊತ್ತು ಕೃಷ್ಣ ಸಂಧಾನಕ್ಕೆ ಹೊರಟು ಬಂದಿದ್ದಾನೆ. ಬೀದಿ ಬೀದಿಗಳಲ್ಲಿ ಜನರು ಕೃಷ್ಣನನ್ನು ಕಾತರದಿಂದ ನೋಡುತ್ತಿದ್ದಾರೆ. ದುರ್ಯೋಧನ ಸ್ವಾಗತಿಸಲು ಕಾಯುತ್ತಿದ್ದಾನೆ. ಕೃಷ್ಣ ಜನರ ನಡುವೆಯೇ ಮರೆಯಾದ. ಸತ್ಕಾರಗಳ ಭಾವುಕ ದಾಳಿಯ ಸಂಚುಗಳನ್ನು ಮೀರಿ ನಡೆದ. ಸ್ವತಃ ದುರ್ಯೋಧನನೇ ಆತಿಥ್ಯಕ್ಕಾಗಿ ನಿಂತು ಸಂತೋಷಕೂಟವನ್ನು ಸ್ವೀಕರಿಸುವಂತೆ ಒತ್ತಾಯಿಸಿದ. ಕೃಷ್ಣ ನಿರಾಕರಿಸಿದ. ಆತ್ಮೀಯತೆ ಬೆರೆತ ಅನ್ನವನ್ನು ಉಣಬಹುದು. ಹಸಿವಿನ ಆಪತ್ತಿಗೊದಗಿದ ತುತ್ತು ತಿನ್ನಬಹುದು. ಆದರೆ ಈಗ ನಿನ್ನಲ್ಲಿ ಎರಡೂ ಇಲ್ಲ. ದೂತನಾಗಿ ಬಂದವನು ಎದುರಾಳಿಯ ಮನೆಯ ಉಪಚಾರ ಪಡೆಯುವಂತಿಲ್ಲ ಎಂಬ ನಿಲುವನ್ನು ಕೃಷ್ಣ ಸ್ಪಷ್ಟಪಡಿಸಿದ. ಭೀಷ್ಮ ದ್ರೋಣರ ಮನೆಗೂ ಹೋಗದೆ ವಿದುರನ ಮನೆಯಲ್ಲಿ ಉಳಿದ. ಆಮಿಷಗಳಿಗೆ ಬಲಿಯಾಗದಿರೋಣ.**

# ವಿವಿಧೆಡೆ ನಡೆದ ಕಾರ್ಯಕ್ರಮಗಳ ಚಿತ್ರಸುದ್ದಿ




ಬೆಂಗಳೂರು ಉತ್ತರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ




ಬಾಗಲಕೋಟೆಯಲ್ಲಿ ಸಮಾಲೋಚನಾ ಸಭೆ



ಹುಬ್ಬಳ್ಳಿಯಲ್ಲಿ ಸದಸ್ಯತಾ ಅಭಿಯಾನ

MAG(3)/NPP/26/2018-19 Registered No. RNI 45459/85
Date of Publishing : 17-08-2018

Posted at Bangalore PSO Bangalore -560 026
Date of Posting 20h or 21st of every month

# ವಿವಿಧೆಡೆ ನಡೆದ ಕಾರ್ಯಕ್ರಮಗಳ ಚಿತ್ರಸುದ್ದಿ




ಬೆಂಗಳೂರು ಉತ್ತರದಲ್ಲಿ ಗುರುವಂದನಾ ಕಾರ್ಯಕ್ರಮ ಹಾಗೂ ಸದಸ್ಯತಾ ಅಭಿಯಾನ




ಕಲ್ಬುರ್ಗಿ ಹಾಗೂ ಕೆ. ಆರ್. ಪೇಟೆಯಲ್ಲಿ ಗುರುವಂದನಾ ಕಾರ್ಯಕ್ರಮ




ಕಲ್ಬುರ್ಗಿ ಹಾಗೂ ಬಾಗಲಕೋಟೆಯಲ್ಲಿ ಸದಸ್ಯತಾ ಅಭಿಯಾನ

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com